ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2020 ಮಾಸ ಪತ್ರಿಕೆ

ಸಂಪುಟ/Volume : 42
ಸಂಚಿಕೆ/Issue : 5
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | February 2020 | Monthly



## ಪರೀಕ್ಷೆ ವರವೋ! ಶಾಪವೋ?



5

## ಹೋಳಿ ಹಬ್ಬದ ಶುಭಾಶಯಗಳು

6

## ವಿವೇಕಾನಂದರ ಕನಸು ಸಾಕಾರಗೊಳಿಸಿದ ಆರ್.ಎಸ್.ಎಸ್.

A Journal of Karnataka State Secondary Teachers' Association

# ಸಂಪಾದಕೀಯ

**ಸಮಸ್ತ ಸಹೃದಯ ಓದುಗರೆಲ್ಲರಿಗೂ ಶಿವರಾತ್ರಿ ಹಬ್ಬದ ಹಾಗೂ ಹೋಳಿ ಹಬ್ಬದ ಶುಭಾಶಯಗಳು**

## ಯಾರು ಹೊಣೆ .....?

**ಇಟ್ಟರೆ ಸಗಣಿಯಾದೆ ತಟ್ಟಿದರೆ ಉರುಳಾದೆ,**
**ಸುಟ್ಟರೆ ನೊಸಲಿಗೆ ವಿಭೂತಿಯಾದೆ,**
**ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ,**
**ನೀನಾರಿಗಾದೆಯೋ ಎಲೆ ಮಾನವ ?**

ಎಸ್.ಜಿ. ನರಸಿಂಹಾಚಾರ್ಯರ ಈ ಗೀತೆ ಕಳೆದ ಕೆಲವೊಂದು ದಿನಗಳಿಂದ ನೆನಪಾಗುತ್ತಲೇ ಇದೆ. ಮಾನವ ಜನ್ಮ ದೊರಕಿರುವುದು ಪೂರ್ವ ಜನ್ಮದ ಪುಣ್ಯದ ಫಲ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎನ್ನುತ್ತಾರೆ ಹಿರಿಯರು. ನಮ್ಮ ಅಸ್ತಿತ್ವದಿಂದ ಇತರರಿಗೂ ಒಂದಿನಿತು ಸಹಾಯ ಆಗುವುದಾದರೆ ಅದು ಮಾನವ ಜನ್ಮದ ಸಾರ್ಥಕ ಕ್ಷಣ.

ಹಿಂದಿನ ಕಾಲದಿಂದಲೂ ಸ್ತ್ರೀ ಗರ್ಭಿಣಿಯಾದರೆ ಗರ್ಭದಿಂದಲೇ ಮಗುವಿಗೆ ಸಂಸ್ಕಾರ ಸಿಗಲೆಂಬ ಕಾರಣದಿಂದ ಪುರಾಣ ಪುಣ್ಯ ಕಥೆಗಳನ್ನು, ಮಹಾನ್ ಯೋಧರ ಜೀವನ ಚರಿತ್ರೆಗಳನ್ನು, ಸಂಗೀತವನ್ನು ಕೇಳುವುದು, ಹೇಳುವುದು ಅಥವಾ ಓದುವುದನ್ನು ನಾವು ಕೇಳಿದ್ದೇವೆ ಹಾಗೂ ಮಕ್ಕಳನ್ನು ಹೆತ್ತಿರುವ ಸ್ತ್ರೀಯಾಗಿದ್ದರೆ ಮಾಡಿದ್ದೇವೆ. ನಮ್ಮ ತಂದೆ–ತಾಯಂದಿರು ಇದನ್ನೆಲ್ಲಾ ಮಾಡಿರುವುದಕ್ಕೆ ನಮ್ಮಲ್ಲಿ ಸಂಸ್ಕಾರವಿದೆಯೆಂದರೆ ತಪ್ಪಾಗಲಾರದು. "ಪರೋಪಕಾರಾರ್ಥಂ ಇದಂ ಶರೀರಂ" ಎಂದು ಹೇಳುತ್ತಾರೆ. ಪರರಿಗೆ ಉಪಕಾರವಾದರೆ ಈ ಶರೀರಕ್ಕೆ ಒಂದು ಬೆಲೆ. ಜೀವನ ಎಂಬುದು ಪ್ರಾರಂಭವಾದರೆ ನಮ್ಮ ಸ್ವಂತ ಮನೆ, ಸಮಾಜ, ರಾಷ್ಟ್ರ ಮೂರರಲ್ಲಿ ಒಂದಕ್ಕಾದರೂ ಉಪಯೋಗವಾದರೆ ನಮ್ಮ ಜನ್ಮ ಸಾರ್ಥಕವಾದಂತೆ. ಈ ಶರೀರ ಭಾರತದಂತಹ ಪುಣ್ಯಕ್ಷೇತ್ರದಲ್ಲಿ ಜನ್ಮ ತಳೆದಿರಬೇಕಾದರೆ ಯಾವುದೋ ಒಂದು ಜನ್ಮದ ಪುಣ್ಯವಲ್ಲ, ಅನೇಕ ಜನ್ಮಗಳ ಪುಣ್ಯದ ಪ್ರತಿಫಲವೇ ಸರಿ. ಇಡೀ ವಿಶ್ವದಲ್ಲಿಯೇ ಎಲ್ಲಾ ರಾಷ್ಟ್ರದವರು ರಾಷ್ಟ್ರವನ್ನು ಕೇವಲ ಭೂಪ್ರದೇಶವೆಂದು ಕರೆದರೆ ಭಾರತೀಯರಾದ ನಾವು ಮಾತೃಭೂಮಿಯೆನ್ನುತ್ತೇವೆ.

"ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪೀ ಗರಿಯಸೀ" ಜನ್ಮ ನೀಡಿದ ಭೂಮಿ ಸ್ವರ್ಗಕ್ಕಿಂತಲೂ ಮಿಗಿಲು ಎಂಬುದು ಅರ್ಥ. ಇಂತಹ ಸಂಸ್ಕಾರಗಳೆಲ್ಲವೂ ಮನುಷ್ಯನಿಗೆ ಮೂರು ಕಡೆಗಳಿಂದ ದೊರಕುತ್ತದೆ. 1. ತಂದೆ–ತಾಯಿ 2. ಶಿಕ್ಷಕರು 3. ಸಮಾಜ. ಮನೆಯೇ ಮೊದಲ ಪಾಠಶಾಲೆ, ತಾಯಿ ಮೊದಲ ಗುರು. ಜೀಜಾಬಾಯಿಯಂತಹ ತಾಯಿ ಇದ್ದಿದ್ದರಿಂದಲೇ ಶಿವಾಜಿಯಂತಹ ದೇಶಭಕ್ತನನ್ನು ಕಾಣಲು ಸಾಧ್ಯವಾಯಿತು. ಈಗಿನ ತಂದೆ–ತಾಯಿಯರಿಬ್ಬರೂ ಉದ್ಯೋಗಸ್ಥರಿರುವುದರಿಂದಲೋ ಏನೋ ಅಥವಾ ಸ್ವಾತಂತ್ರ್ಯ ಯಾರದ್ದೋ ಬಲಿದಾನದಿಂದ ಯಾವಾಗಲೋ ಸಿಕ್ಕಿದೆ, ಇನ್ನೇಕೆ ನಮಗೆ ದೇಶಭಕ್ತಿ ಅಥವಾ ರಾಷ್ಟ್ರೀಯತೆಯ ಭಾವನೆ ಎನ್ನುವ ಉದಾಸೀನವೋ ಏನೋ ಮಕ್ಕಳಲ್ಲಿ ದೇಶಭಕ್ತಿಯಂತಹ ಗುಣವನ್ನು ಬೆಳೆಸುತ್ತಿಲ್ಲ.

ಮಕ್ಕಳಲ್ಲಿ ರಾಷ್ಟ್ರೀಯತೆಯ ಮನೋಭಾವ ಬೆಳೆಸಬೇಕಾದ ಜವಾಬ್ದಾರಿ ಹೊತ್ತಿರುವವರು ಶಿಕ್ಷಕರು. ಪಠ್ಯಕ್ರಮದಲ್ಲಿ ಏನೇ ಇರಲಿ, ಪಠ್ಯಬೋಧನೆಯ ಜೊತೆ ರಾಷ್ಟ್ರೀಯತೆಯನ್ನು ಬೆಳೆಸಬೇಕಾದದು ನಮ್ಮೆಲ್ಲ ಶಿಕ್ಷಕ ಬಂಧುಗಳ ಕರ್ತವ್ಯ.

ಮೂರನೇಯದು ಸಮಾಜ. ಸಮಾಜದಲ್ಲಿಯೂ ಸಹ ಪ್ರೌಢಾವಸ್ಥೆಗೆ ತಲುಪುತ್ತಿರುವ ಮಕ್ಕಳಿಗೆಲ್ಲಾ ರಾಷ್ಟ್ರೀಯತೆಯ ಮನೋಭಾವನೆ ಬೆಳೆಸಲು ಸಹಕಾರಿಯಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಪ್ರೌಢಾವಸ್ಥೆಯಲ್ಲಿರುವ ಮಕ್ಕಳನ್ನು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು.

ಈ ಎಲ್ಲ ಕೆಲಸಗಳನ್ನು ತಂದೆ–ತಾಯಿ, ಶಿಕ್ಷಕ ಮತ್ತು ಸಮಾಜ ಮಾಡದಿದ್ದರೆ ಈಗ ನಾವೇನು ದೇಶದ್ರೋಹದ ಕೆಲಸ ಮಾಡಿ ವಿಜಯದ ಸಂಕೇತ ತೋರಿಸುತ್ತಾ ಸಮೂಹ ಮಾಧ್ಯಮಗಳಲ್ಲಿ ಅತಿ ಪ್ರಚಾರ ಪಡೆಯುತ್ತಿರುವ ದೇಶದ್ರೋಹಿಗಳಾದ ಅಮೂಲ್ಯ, ಆದ್ರಾ ಮುಂತಾದಂತವುಗಳನ್ನು ಕಾಣಬೇಕಾದೀತು. ಇದೇ ಪುಣ್ಯಭೂಮಿಯಲ್ಲಿ ಜನಿಸಿ, ಇಲ್ಲಿಯ ಎಲ್ಲಾ ಸೌಲತ್ತುಗಳನ್ನು ಪಡೆದು ಬೇರೆ ದೇಶಕ್ಕೆ ಜಯಕಾರ ಹಾಕುವಂತಹ ದೇಶದ್ರೋಹಿಗಳನ್ನು ಕಾಣಬೇಕಾದೀತು.

ಇಂತಹ ದೇಶದ್ರೋಹಗಳಿಂದ ತಂದೆ–ತಾಯಿ, ಸಮಾಜ ಮತ್ತು ರಾಷ್ಟ್ರ ಯಾವುದಕ್ಕೂ ಸಹ ಒಂದೂ ಬಿಡಿಗಾಸೂ ಉಪಯೋಗವಿಲ್ಲ. ಇಂತಹ ದೇಶದ್ರೋಹಿಗಳು ಇಷ್ಟರ ಮಟ್ಟಿಗೆ ಸ್ವಂತ ನಾಡಿನಲ್ಲಿ ಬೆಳೆಯಬೇಕಾದರೆ ಕಾರಣಕರ್ತರು ಯಾರು?

ತಮ್ಮನ್ನೇ ತಾವು ವಿಚಾರವಾದಿಗಳು, ಬುದ್ಧಿಜೀವಿಗಳೆಂದು ಕರೆದುಕೊಳ್ಳುವವರು, ವಿದೇಶಗಳ ಎಂಜಲು ಕಾಸಿಗೆ ಜೊಲ್ಲು ಸುರಿಸುತ್ತಾ ತಮ್ಮತನವನ್ನು ಮಾರಿಕೊಳ್ಳುತ್ತಾ ಪ್ರೌಢಾವಸ್ಥೆಯಲ್ಲಿ ದೇಶದ ಅಭಿವೃದ್ಧಿಗೆ ಶ್ರಮಿಸಬೇಕಾದ ಯುವ ಪೀಳಿಗೆಯನ್ನು ದಾರಿ ತಪ್ಪಿಸುತ್ತಿದ್ದಾರೆ. ಇಂತಹವರು ಒಳ್ಳೆಯ ಆಯಕಟ್ಟಿನ ಜಾಗಗಳಲ್ಲಿ ಎಲ್ಲಾ ವಿಧಗಳಲ್ಲಿ ತುಂಬಿಕೊಂಡಿದ್ದಾರೆ. ಪಠ್ಯಪುಸ್ತಕ ರಚನಾ ಸಮಿತಿಯಿಂದ ಹಿಡಿದು, ಅಧ್ಯಾಪಕ ವೃಂದದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯಗಳಲ್ಲಿ, ಸಮಾಜದಲ್ಲಿ ಸೇರಿಕೊಂಡು ಉಂಡ ಮನೆಗೆ ದ್ರೋಹ ಬಗೆಯುತ್ತಿದ್ದಾರೆ.

ಅತಿ ಕಡಿಮೆ ಬೆಲೆಯಲ್ಲಿ ಪುಸ್ತಕ ಪ್ರಕಟಿಸಿ, ಉಚಿತ ವಿತರಣೆ ಮಾಡುತ್ತಾ ಯುವ ಪೀಳಿಗೆಯ ಮೇಲೆ ಬೌದ್ಧಿಕ ದಾಳಿ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಯುವಪೀಳಿಗೆಯನ್ನು ಮಾನಸಿಕವಾಗಿ, ವೈಚಾರಿಕವಾಗಿ, ಬೌದ್ಧಿಕವಾಗಿ ರಾಷ್ಟ್ರೀಯತೆಯ ಮನೋಭಾವ ಹೊಂದಿದವರನ್ನಾಗಿ ಮಾಡುವುದೇ ಇಂದಿನ ಶಿಕ್ಷಕರ ಆದ್ಯ ಜವಾಬ್ದಾರಿಯಾಗಿದೆ.

ಸ್ವಚ್ಛ ಭಾರತ ಅಭಿಯಾನವನ್ನು ದೇಶದ ಸ್ವಚ್ಛತೆಗಾಗಿ ಮಾತ್ರವಲ್ಲ, ವಿಶ್ವವಿದ್ಯಾಲಯ, ಕಾಲೇಜ್ ಕ್ಯಾಂಪಸ್, ಶಾಲೆಗಳಲ್ಲಿರುವ ಬೌದ್ಧಿಕ ಸ್ವಚ್ಛತೆಗೂ ಅತೀ ಶೀಘ್ರವಾಗಿ ಮಾಡಲೇಬೇಕಾಗಿದೆ.

ಸಂಪಾದಕ

# ಸೂಕ್ತಿ



ಯುಕ್ತ ಹಾಗೂ ಅಯುಕ್ತವಾದುದನ್ನು ವಿಮರ್ಶೆ ಮಾಡಿ ಬುದ್ಧಿವಂತಿಕೆಯಿಂದ ಕಾರ್ಯವನ್ನು ಸಾಧಿಸಿ ಜೀವನ ನಿರ್ವಹಣೆ ಮಾಡುವವನು ಉತ್ತಮ ಎನಿಸಿದರೆ, ಭುಜಬಲಪರಾಕ್ರಮಗಳಿಂದ ತನ್ನ ಕೆಲಸವನ್ನು ಸಾಧಿಸುವವನು ಮಧ್ಯಮ ಎನಿಸಿಕೊಳ್ಳುತ್ತಾನೆ. ಯಾವ ಬುದ್ಧಿವಂತಿಕೆಯನ್ನೂ ಬಳಸದೆ ಕೇವಲ ಅಲ್ಪಕಾರ್ಯಗಳನ್ನು ಮಾಡುತ್ತಾ ಆಯಾ ದಿನದ ಆಹಾರವನ್ನು ಸಂಪಾದಿಸುವವನು ಅಧಮ ಎಂದೆನಿಸುತ್ತಾನೆ.

- ಕೇಶಿನೀ- ವಿರೋಚನ ಕಥಾ

# ಪರಿವಿಡಿ


- ಪರೀಕ್ಷೆ : ವರವೋ! ಶಾಪವೋ? 3
- ದೈಹಿಕ ಪರಿಶ್ರಮ 4
- ಕಾಮ ದಹನದ ಶುಭ ಕಾಮನೆಗಳು 5
- ವಿವೇಕಾನಂದರ ಕನಸು ಸಾಕಾರಗೊಳಿಸಿದ ಆರ್.ಎಸ್.ಎಸ್. 6
- ಪ್ರಕೃತಿಯಿಂದ ಪಾಠ 8
- ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಫೋನ್– ಇನ್ ಕಾರ್ಯಕ್ರಮ ವಿನೂತನ ತಂತ್ರ 9
- ಮೇದಿನಿಪುರದಲ್ಲೊಂದು ಕ್ರಾಂತಿಯ ಕಲರವ.. 10

# ಪರೀಕ್ಷೆ : ವರವೋ! ಶಾಪವೋ?

ಡಾ|| ಟಿ. ಎನ್. ಲೋಕೇಶ್
ಶಿಕ್ಷಣ ತಜ್ಞರು ಮತ್ತು ಚಿಂತಕರು



ಪ್ರತಿಯೊಬ್ಬರ ವಿದ್ಯಾರ್ಥಿ ದೆಸೆಯಲ್ಲಿನ ನಿರ್ಣಾಯಕ ಘಟ್ಟಗಳೆ ಪರೀಕ್ಷೆ. ಪರೀಕ್ಷೆ ಎಂದೊಡನೆ ಇಂದಿನ ತಲೆಮಾರಿನ ವಿದ್ಯಾರ್ಥಿ ಸಮೂಹ ಗರಬಡಿದಂತೆ ವರ್ತಿಸುವುದು ಸರ್ವೆ ಸಾಮಾನ್ಯದ ಸಂಗತಿ. ಪರೀಕ್ಷೆ ಎಂಬ ಗ್ರಹಣ ವಿದ್ಯಾರ್ಥಿಯ ನೈಜ ಪ್ರತಿಭೆಯ ಪ್ರಭೆಯನ್ನು ಕತ್ತಲಾಗಿಸುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ವರ್ಷವೆಲ್ಲ ಓದಿದ್ದನ್ನು ಕೇವಲ ಮೂರು ತಾಸಿನಲ್ಲಿ ಪರೀಕ್ಷೆ ಬರೆದು ಹಣೆ ಬರಹ ಜರಿಯುವ ವಿದ್ಯಾರ್ಥಿಗಳ ಗುಂಪು ಜಾಸ್ತಿ ಕಾಣಸಿಗುತ್ತದೆ. ಆದ್ದರಿಂದಲೇ ಪರೀಕ್ಷೆ ಎನ್ನುವುದು ವಿದ್ಯಾರ್ಥಿ ಪಾಲಿಗೆ ವರವೋ! ಶಾಪವೋ? ಎಂಬ ಜಿಜ್ಞಾಸೆ ಸದಾ ನಮ್ಮನ್ನು ಎಡತಾಕುವ ಸಂಗತಿಯೆ ಸರಿ.

ಇಂದಿನ ತಲೆಮಾರಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ಎಂದಾಕ್ಷಣ ಆತಂಕ, ದುಗುಡ, ಭಯ ಒತ್ತಡದಿಂದ ತತ್ತರಿಸಿ ಅವರ ಆತ್ಮವಿಶ್ವಾಸದ ಜಂಘಾಬಲವೇ ಹುದುಗಿಹೋಗುತ್ತದೆ. ಆದ್ದರಿಂದ ಪರೀಕ್ಷಾ ಸಿದ್ಧತೆಯ ಜಯ ಅಪಜಯಕ್ಕೆ ಕೇವಲ ವಿದ್ಯಾರ್ಥಿಯನ್ನು 'ಹರಕೆಯ ಕುರಿ' ಮಾಡುವ ಸಾಂಪ್ರದಾಯಿಕ ದೃಷ್ಟಿಕೋನ ಬದಲಾಗಬೇಕಾಗಿದೆ. ವಿದ್ಯಾರ್ಥಿಯ ಪರೀಕ್ಷಾ ಸಿದ್ಧತೆಯಲ್ಲಿ ಶಿಕ್ಷಕ ಮತ್ತು ಪೋಷಕರ ಸಮಾನ ಜವಾಬ್ದಾರಿಯ ಅರಿವು ಇದೆ ಎಂಬುದರ ಅನಿವಾರ್ಯತೆ ಮೊದಲಿಗಿಂತಲೂ ಈಗ ಹೆಚ್ಚು ಪ್ರಸ್ತುತವೆನಿಸುತ್ತದೆ.

ಪ್ರತಿಯೊಬ್ಬ ವಿದ್ಯಾರ್ಥಿ ಶೈಕ್ಷಣಿಕ ಸಾಧನೆಯ ದೃಷ್ಟಿಕೋನದಿಂದ ವರ್ಷದ ಆರಂಭದಿಂದ ಕೊನೆಯವರೆಗೆ 4 ರಿಂದ 5 ತಾಸು ಅಭ್ಯಾಸ ಮಾಡಿದರೆ ಅದ್ಭುತ ಸಾಧನೆಯನ್ನು ಮಾಡಬಹುದು. ಪರೀಕ್ಷೆಯ ದೃಷ್ಟಿಯಿಂದ ವಿದ್ಯಾರ್ಥಿ ಎಷ್ಟು ಹೊತ್ತು ಓದುತ್ತಾರೆ ಅನ್ನುವುದು ಮುಖ್ಯವಲ್ಲ. ಆದರೆ ಓದಿದ್ದು ಎಷ್ಟರಮಟ್ಟಿಗೆ ಅರ್ಥವಾಗಿ, ಗ್ರಹಿಕೆ ಮನಸ್ಸಿನಲ್ಲಿ ಉಳಿಯುತ್ತದೆ ಎಂಬುದು ಮುಖ್ಯವಾಗುತ್ತದೆ.

ಹೆಚ್ಚು ಹೆಚ್ಚು ಅಧ್ಯಯನ ಶೀಲತೆ ಬೆಳಸಿಕೊಂಡರೆ ಆತ್ಮವಿಶ್ವಾಸ ನೂರ್ಮಡಿಯಾಗುತ್ತದೆ. ಆತ್ಮವಿಶ್ವಾಸ ಒಮ್ಮೆ ಮೂಡಿತೆಂದರೆ ಪರೀಕ್ಷೆಯ ದುಗುಡ ಮತ್ತು ಒತ್ತಡದಿಂದ ಹೊರಬಂದು ಪರೀಕ್ಷೆಯನ್ನು ಸಹಜವಾಗಿ ಎದುರಿಸಲು ಸಾಧ್ಯವಾಗುತ್ತದೆ. ಆದರೆ ಅತಿಯಾದ ಆತ್ಮವಿಶ್ವಾಸ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಗೆ ಮಾರಕ. ಪರೀಕ್ಷೆಯನ್ನು ಮನೋವೈಜ್ಞಾನಿಕವಾಗಿ ಗೆಲ್ಲುವ ಸಾಮಾನ್ಯ ಪ್ರಜ್ಞೆಯನ್ನು ವಿದ್ಯಾರ್ಥಿಗಳು ಗಳಿಸಬೇಕಾಗುತ್ತದೆ. ನಿರಂತರ ಶ್ರಮವಹಿಸಿ ಶ್ರದ್ಧೆಯಿಂದ ಕಲಿಯುವ, ಅಭ್ಯಸಿಸುವ ವಿದ್ಯಾರ್ಥಿ ಪರೀಕ್ಷೆಯೊಂದಿಗೆ ಸ್ನೇಹ ಸಂಪಾದಿಸಿ, ಪರೀಕ್ಷೆಯನ್ನು ಸವಾಲಿನಂತೆ ಸ್ವೀಕರಿಸಿ ಯಶಸ್ಸು ಕಾಣುತ್ತಾನೆ. ಆದರೆ ಸೋಮಾರಿಗೆ ಪರೀಕ್ಷೆ ಶಿಕ್ಷೆಯಾಗಿ ಪರಿಣಮಿಸುತ್ತದೆ. ಪರೀಕ್ಷೆಯನ್ನು ಹಬ್ಬದ ರೀತಿ ಆಚರಿಸಿ, ಸಂಭ್ರಮಿಸುವ ಮನಸ್ಥೈರ್ಯವನ್ನು ವಿದ್ಯಾರ್ಥಿಗೆ ತಂದುಕೊಡುವಲ್ಲಿ ಶಿಕ್ಷಕ ಹಾಗೂ ಪೋಷಕರ ಪಾತ್ರ ಹೆಚ್ಚು ಪ್ರಮುಖವೆನಿಸುತ್ತದೆ.

ವಿದ್ಯಾರ್ಥಿ ಪರೀಕ್ಷಾ ಸಿದ್ಧತೆಯ ತಯಾರಿಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದರೆ ಆತನಲ್ಲಿ ಆತ್ಮವಿಶ್ವಾಸ ತನ್ನ ತಾನೇ ವೃದ್ಧಿಸಿ ಆತ ಪರೀಕ್ಷಾ ಜ್ವರದಿಂದ ಹೊರಬರಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿ ಪರೀಕ್ಷಾ ಸಿದ್ಧತೆಗೆ ಸಂಬಂಧಿಸಿದಂತೆ ತನ್ನ ವೈಯಕ್ತಿಕ ವೇಳಾಪಟ್ಟಿಯ ರೂಪುರೇಷೆಯ ನೀಲಿ ನಕಾಶೆ ತಯಾರಿಸಿಕೊಳ್ಳಬೇಕು. ಅದರಲ್ಲಿ ಅಧ್ಯಯನ ಮಾಡಬೇಕಾದ ವಿಷಯಗಳು, ವಿಷಯದ ಸಂಕೀರ್ಣತೆ, ಸಮಯದ ಹಂಚಿಕೆ, ಸಾಧಿಸಬೇಕಾಗಿರುವ ಗುರಿಗಳು ಇತ್ಯಾದಿಗಳ ಅರಿವು ಇದ್ದರೆ ಅದಕ್ಕೆ ತಕ್ಕಂತೆ ಜಾಗೃತನಾಗಿ ಕಾರ್ಯಪ್ರವೃತ್ತನಾದರೆ ಖಂಡಿತಾ ನೂರಕ್ಕೆ ನೂರರಷ್ಟು ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ.

ಪರೀಕ್ಷಾ ವೇಳಾಪಟ್ಟಿ ಪ್ರಕಟಣೆಗೊಂಡ ನಂತರ ವಿದ್ಯಾರ್ಥಿಗಳು ಕೊನೆಯ ದಿನಾಂಕದಂದು ನಮೂದಾಗಿರುವ ವಿಷಯಗಳು ಹಾಗೂ ಯಾವ ವಿಷಯಗಳನ್ನು ಅಧ್ಯಯನ ಮಾಡಲು ಬಿಡುವಿಲ್ಲದಿರುವುದೋ ಅಂತಹ ವಿಷಯಗಳನ್ನು ಮೊದಲು ಓದಿ ಮುಗಿಸಿ ವೇಳಾಪಟ್ಟಿಯ ಪ್ರಾರಂಭದ ದಿನಾಂಕದಂದಿರುವ ವಿಷಯಗಳನ್ನು ನಂತರದಲ್ಲಿ ಅಧ್ಯಯನ ಮಾಡುವಂತೆ ಯೋಜನೆ ತಯಾರಿಸಿಕೊಳ್ಳಬೇಕು. ಜೊತೆಗೆ ವಿಷಯಗಳ ಕ್ಲಿಷ್ಟತೆಯ ದೃಷ್ಟಿಯಿಂದ ದಿನಗಳನ್ನು ಕಾಯ್ದಿರಿಸಿಕೊಳ್ಳಬೇಕು. ಚಾಚೂತಪ್ಪದೆ ಅದರಂತೆ ಅಧ್ಯಯನಶೀಲರಾಗಬೇಕು.

ವಿದ್ಯಾರ್ಥಿ ಅಧ್ಯಯನ ಮಾಡುವ ಕೊಠಡಿ ಸ್ವಚ್ಛತೆಯಿಂದ ಕೂಡಿರಬೇಕು. ಅಧ್ಯಯನಕ್ಕೆ ಬೇಕಾದ ಸಕಲ ಪರಿಕರಗಳಾದ ಪುಸ್ತಕ, ಪೆನ್ನು, ಪೆನ್ಸಿಲ್ ಮುಂತಾದವುಗಳನ್ನು ವ್ಯವಸ್ಥಿತವಾಗಿ ಜೋಡಿಸಿಕೊಂಡಿರಬೇಕು. ಯೋಜಿತ ವೇಳಾಪಟ್ಟಿಯನ್ನು ಸದಾ ಕಾಣುವಂತೆ ಅಥವ ಗೋಡೆಗೆ ಅಂಟಿಸಿಕೊಂಡಿರಬೇಕು. ಯಾವುದೇ ಸಮಯದಲ್ಲಾದರೂ ವೇಳಾಪಟ್ಟಿ ನೋಡಿದಾಗ ಅದು ವಿದ್ಯಾರ್ಥಿಯನ್ನು ಜಾಗೃತಗೊಳಿಸುವಂತಿರಬೇಕು.

ವಿದ್ಯಾರ್ಥಿ ಓದಿನಲ್ಲಿ ಏಕಾಗ್ರತೆ ಸಾಧಿಸಬೇಕೆಂದರೆ ನಿಗ್ರಹ ಸಾಧಿಸುವುದು ಅತ್ಯಗತ್ಯ. ಪಂಚೇಂದ್ರಿಯಗಳ ಒತ್ತಾಸೆಯ ಸುಖಕ್ಕೆ ಹಾಗೂ ಅಧ್ಯಯನ ವಿರುದ್ಧ ದಿಕ್ಕಿಗೆ ಮನಸ್ಸು ಸೆಳೆಯುವ ಅಂಶಗಳಿಗೆ ಕಡಿವಾಣ ಹಾಕಿ ಮನಸ್ಸನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡು ಸಮಯ ವ್ಯರ್ಥಮಾಡದೆ ಅಧ್ಯಯನಕ್ಕೆ ತಕ್ಕಂತೆ ಮನಸ್ಸನ್ನು ನಿರ್ವಹಿಸುವುದೇ ನಿಗ್ರಹ. ಆಗ ಮಾತ್ರ ವಿದ್ಯಾರ್ಥಿ ಅಧ್ಯಯನ, ಮನನ, ಪುನರ್ಮನನ ಹಾಗೂ ನಿಧಿದ್ಯಾಸನಗಳನ್ನು ಅವಿಚ್ಛಿನ್ನವಾಗಿ ರೂಢಿಸಿಕೊಳ್ಳುವ ಸಂಭವವಿರುತ್ತದೆ.

'ವಿದ್ಯೆ ಸಾಧಕನ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ'. ದಿನದಲ್ಲಿ ಕನಿಷ್ಠ ಆರೇಳು ತಾಸು ನಿದ್ರೆ ಮಾಡಬೇಕಾಗುತ್ತದೆ. ನಿದ್ರೆಯಿಂದ ಮೆದುಳಿಗೆ ವಿಶ್ರಾಂತಿ ದೊರೆತು ಅದರ ಕಾರ್ಯಕ್ಷಮತೆ ಹೆಚ್ಚಾಗುತ್ತದೆ ನಿದ್ರೆಗೆಟ್ಟು ಓದುವುದು ಆರೋಗ್ಯದ ದೃಷ್ಟಿಯಿಂದ ಹಾಗೂ ಓದಿದ್ದನ್ನು ದೀರ್ಘಕಾಲ ಸ್ಮೃತಿಯಲ್ಲಿರಿಸಿಕೊಳ್ಳುವ ದೃಷ್ಟಿಯಿಂದ ಒಳ್ಳೆಯದ್ದಲ್ಲ. ಪರೀಕ್ಷಾ ಮುನ್ನಾ ದಿನ ಚೆನ್ನಾಗಿ ಆತ್ಮವಿಶ್ವಾಸದ ನಿದ್ರೆ ಮಾಡಿ ಯೋಗ, ಪ್ರಾಣಾಯಾಮ ಮತ್ತು ಧ್ಯಾನ ಮಾಡಿ ಮನಸ್ಸು ಮತ್ತು ಶರೀರವನ್ನು ಉಲ್ಲಾಸಕರವಾಗಿ ಇಟ್ಟುಕೊಂಡರೆ ನೀವು ಅಂದುಕೊಂಡಂತೆ ಸಾಧನೆಮಾಡಿ ಪರೀಕ್ಷೆಯಲ್ಲಿ ಯಶಸ್ಸನ್ನು ಕಾಣಬಹುದು. ವಿದ್ಯಾರ್ಥಿಗಳು ಸಾಧನೆಯ ಸಾಕ್ಷಾತ್ಕಾರಕ್ಕೆ

ಪುಟ 4 ಕ್ಕೆ ➤

➤ ಪುಟ 3 ರಿಂದ..... ಸಿಎಎ ಮತ್ತು ಎನ್‌ಆರ್‌ಸಿ...

ತಮ್ಮ ದೇಹವನ್ನು ಸಾಧನವಾಗಿ ಬಳಸಿಕೊಂಡರೆ ಮಾತ್ರ ಮಹಾನ್ ಕಾರ್ಯಗಳು ಸಂಭವಿಸಲು ಸಾಧ್ಯ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು 'ಮಹಾನ್ ಕಾರ್ಯಗಳು ಮಹಾನ್ ತ್ಯಾಗದಿಂದ ಮಾತ್ರ ಸಾಧ್ಯ' ಎಂದಿರುವುದು. ಈ ಉದ್ಘೋಷ ಅಕ್ಷರಶಃ ವಿದ್ಯಾರ್ಥಿ ಜೀವನದ ಯಶಸ್ಸಿಗೆ ಹೇಳಿ ಮಾಡಿಸಿದ ಮಂತ್ರವಾಗಿದೆ.

ಶಿಕ್ಷಕರು ಮತ್ತು ಪೋಷಕರು ಓದುವುದನ್ನು ವಿದ್ಯಾರ್ಥಿಗಳಿಗೆ ಬಲವಂತವಾಗಿ ಹೇರಬಾರದು. ಕೆಲವೊಮ್ಮೆ ಪೋಷಕರು ಪದೇ ಪದೇ ತಮ್ಮ ಮಕ್ಕಳನ್ನು ಓದುವುದನ್ನು ಬಿಟ್ಟು ಮಿಕ್ಕೆಲ್ಲವನ್ನು ಮಾಡುವೆ ಎಂಬ ಮೂದಲಿಸುವ ಮನಃಸ್ಥಿತಿಯನ್ನು ಕೈಬಿಡಬೇಕು. ತಮ್ಮ ಮಕ್ಕಳನ್ನು ಇತರೇ ಮಕ್ಕಳೊಂದಿಗೆ ಹೋಲಿಸಿ ಮೂದಲಿಸುವ ಚಾಳಿಯನ್ನು ಸಹ ಕೈಬಿಡಬೇಕು. ಕಾರಣವೆಂದರೆ ಎಲ್ಲಾ ಮಕ್ಕಳು ಒಂದೇ ಬಗೆಯ ಸಾಮರ್ಥ್ಯ ಮತ್ತು ಆಸಕ್ತಿ ಹೊಂದಿರುವುದಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ವೈಯಕ್ತಿಕ ಭಿನ್ನತೆ ಇರುತ್ತದೆ. ಮಕ್ಕಳ ಬಲ ಮತ್ತು ದೌರ್ಬಲ್ಯಗಳನ್ನು ತೆರೆದ ಮನಸ್ಸಿನಿಂದ ಒಪ್ಪಿಕೊಂಡು ಶಿಕ್ಷಕ ಮತ್ತು ಪೋಷಕರು ವಿದ್ಯಾರ್ಥಿಯ ಉತ್ತಮ ಜೀವನಕ್ಕೆ ಭಾಷ್ಯ ಬರೆಯಲು ಸಾಧ್ಯ!

ಪರೀಕ್ಷಾ ಸಿದ್ಧತೆ ನಡೆಸುವ ಪ್ರತಿಯೊಬ್ಬ ವಿದ್ಯಾರ್ಥಿ ಪೌಷ್ಠಿಕಯುಕ್ತ ಸಮತೋಲನ ಆಹಾರವನ್ನು ಸೇವಿಸಬೇಕು. ಅನಗತ್ಯ ಹೆಚ್ಚು ಆಹಾರದ ಸೇವನೆ ಹಾಗೂ ಅಗತ್ಯಕ್ಕಿಂತ ಕಡಿಮೆ ಆಹಾರದ ಸೇವನೆ ಕೂಡ ಒಳಿತಲ್ಲ. ಆದ ಕಾರಣ ಡ್ರೈಫ್ರೂಟ್ಸ್, ಹಣ್ಣುಗಳು, ಹಸಿತರಕಾರಿ, ಮೊಳಕೆ ಕಾಳುಗಳು ಹಾಗೂ ಹೆಚ್ಚು ನೀರು ಸೇವಿಸುವುದನ್ನು ಆಹಾರದ ಕ್ರಮವಾಗಿ ಬಳಸಿ, ಮಾನಸಿಕ ಮತ್ತು ದೈಹಿಕ ಸ್ವಸ್ಥತೆ ಕಾಪಾಡಿಕೊಳ್ಳುವುದನ್ನು ಅವಶ್ಯಕವಾಗಿ ಗಮನಿಸಬೇಕು. ಅಂಕ ಗಳಿಸಿದರೆ ಮಾತ್ರ ಮರ್ಯಾದೆ ಎಂಬ ಮನಸ್ಥಿತಿ ಸಮಾಜದಲ್ಲಿ ಬದಲಾಗಬೇಕು. ಜೊತೆಗೆ ವಿದ್ಯಾರ್ಥಿಗಳು ತಮ್ಮ ಜ್ಞಾನಾರ್ಜನೆಗೋಸ್ಕರ ಓದಬೇಕೇ ಹೊರತು ಅಪ್ಪ–ಅಮ್ಮನ ಬಲವಂತಕ್ಕೆ ಓದಬಾರದು. ಪರೀಕ್ಷಾ ಕೊಠಡಿಗೆ ಆತ್ಮವಿಶ್ವಾಸದಿಂದ ಮುನ್ನುಗ್ಗಿ ಪ್ರಶ್ನೆ ಪತ್ರಿಕೆ ಪಡೆದ ನಂತರ ಕನಿಷ್ಠ ಐದು ನಿಮಿಷಗಳವರೆಗೆ ಅದನ್ನು ಓದಿ ಸ್ಥಿತಪ್ರಜ್ಞತೆ ಕಾಯ್ದುಕೊಳ್ಳಬೇಕು. ಯಾವ ಪ್ರಶ್ನೆಗಳನ್ನು ಉತ್ತರಿಸಬೇಕೆಂದು ಮೊದಲೇ ತೀರ್ಮಾನಿಸಿ ಚೆನ್ನಾಗಿ ಉತ್ತರ ಗೊತ್ತಿರುವ ಪ್ರಶ್ನೆಗಳಿಂದ ಬರೆಯಲು ಆರಂಭಿಸಬೇಕು. ಅಗತ್ಯವಿರುವ ಯಾವುದೇ ಪ್ರಶ್ನೆಯನ್ನು ಬಿಡದೆ ಉತ್ತರಿಸಬೇಕು. ಪರೀಕ್ಷೆಯಲ್ಲಿ ಸಮಯದ ಪ್ರಜ್ಞೆ ಇರಲಿ. ಪರೀಕ್ಷೆ ಮುಗಿದ ನಂತರ ಸ್ನೇಹಿತರೊಂದಿಗೆ ಚರ್ಚೆ ಮಾಡದಿರಿ. ಆದರೆ ಮುಂದಿನ ಪ್ರಶ್ನೆ ಪತ್ರಿಕೆ ಎದುರಿಸಲು ಮಾನಸಿಕವಾಗಿ ಸಿದ್ಧರಾಗಿರಿ.

ಪೋಷಕರು ಮಕ್ಕಳ ಮೇಲೆ ಹೆಚ್ಚಿನ ಒತ್ತಡ ತರದಂತೆ ಎಚ್ಚರಿಕೆ ವಹಿಸಬೇಕು. ಮನೆಯಲ್ಲಿ ಪ್ರತಿನಿತ್ಯ ಮಕ್ಕಳ ಓದಿನ ಅನುಸರಣೆ ಕಾರ್ಯ ಮಾಡಬೇಕು. ಮನೆಯಲ್ಲಿ ಮಗುವಿನ ಓದನ್ನು ಬೇರೆಡೆಗೆ ಸೆಳೆಯುವ, ಏಕಾಗ್ರತೆಗೆ ಭಂಗ ತರುವ ಟಿವಿ, ಮೊಬೈಲ್, ಕಂಪ್ಯೂಟರ್ ಮತ್ತು ಲ್ಯಾಪ್‌ಟ್ಯಾಪ್‌ಗಳ ಬಗ್ಗೆ ಎಚ್ಚರವಹಿಸುವುದು ಅವಶ್ಯಕ. ಒಟ್ಟಾರೆ ಮಗುವಿಗೆ ಬೇಕಾದ ಆರೋಗ್ಯಕರ, ಆಹ್ಲಾದಕರ ಕಲಿವಿನ ವಾತಾವರಣ ಸೃಜಿಸುವುದು ಪೋಷಕರ ಆದ್ಯಕರ್ತವ್ಯವೇ ಆಗಿದೆ.

ಶಿಕ್ಷಕ ಮತ್ತು ಪೋಷಕರಾದ ನಾವು ಶಿಕ್ಷಣ ಜೀವನಕ್ಕಾಗಿ, ಜೀವನ ರಾಷ್ಟ್ರಕ್ಕಾಗಿ ಎಂಬುದನ್ನು ಅರ್ಥೈಸಿಕೊಂಡು ನಮ್ಮ ಮಕ್ಕಳ ಭವಿಷ್ಯದ ಶಿಲ್ಪಿಗಳಾಗಿ ಅವರನ್ನು ಈ ರಾಷ್ಟ್ರದ ಸತ್ಪ್ರಜೆಗಳನ್ನಾಗಿ ರೂಪಿಸೋಣ. ●

**ಗಾಂಧೀಜಿ 150**
**ಮಾಲಿಕೆ–5**

# ದೈಹಿಕ ಪರಿಶ್ರಮ

■ **ಶ್ವೇತಾದ್ರಿ**
ನಿವೃತ್ತ ಮುಖ್ಯ ಶಿಕ್ಷಕರು

ಸಬರಮತಿ ಆಶ್ರಮದ ಸದಸ್ಯರು ದೇಶ ಸೇವೆಗಾಗಿ ತಾವು ಅರ್ಹರಾಗಿದ್ದು, ನಿರಂತರ ಪ್ರಯತ್ನದಲ್ಲಿ ನಿರತರಾಗಿರಬೇಕು ಹಾಗೂ ಸಾರ್ವತ್ರಿಕ ಒಳಿತಿನ ವಿಚಾರದಲ್ಲಿ ಅಸಂಗತನಾಗಿರಬಾರದು ಎಂಬ ಧ್ಯೇಯದೊಂದಿಗೆ ಅಹಮದಾಬಾದಿನ ಕೊಚರ್ಬ್ ಪ್ರದೇಶದ ಸಬರಮತಿ ನದಿಯ ದಡದಲ್ಲಿ ಗಾಂಧಿಯವರು ತಮ್ಮ ಅನುಯಾಯಿಗಳೊಂದಿಗೆ 1915ರ ಮೇ 25ರಂದು ಆಶ್ರಮವನ್ನು ಸ್ಥಾಪಿಸಿದರು. ಅಲ್ಲಿ ಅನುಸರಿಸಲಾಗುತ್ತಿದ್ದ ನಿಯಮಗಳಲ್ಲಿ ಕೆಲವನ್ನು ಇಲ್ಲಿ ಪರಿಚಯಿಸಲು ಪ್ರಯತ್ನಿಸಲಾಗಿದೆ.

**ದೈಹಿಕ ಪರಿಶ್ರಮ :** ವ್ಯಕ್ತಿಯಿಂದ ಸಮಾಜಕ್ಕೆ ಹಾಗೂ ಆ ವ್ಯಕ್ತಿಗೇ ಆಗುವ ಹಾನಿಯಿಂದ ರಕ್ಷಿಸಲು ಇರುವ ಏಕೈಕ ಮಾರ್ಗವೆಂದರೆ ವ್ಯಕ್ತಿಯು ದೈಹಿಕ ಪ್ರರಿಶ್ರಮದಿಂದ ತನ್ನ ಭೌತಿಕ ಅಸ್ತಿತ್ವವನ್ನು ಜೀವಂತವಾಗಿರಿಸುವುದು. ಯುಕ್ತವಾದ ಕಾರಣವಿಲ್ಲದೆ ದೈಹಿಕ ಸಾಮರ್ಥ್ಯವುಳ್ಳ ಯುವಕರು ತಮ್ಮ ಎಲ್ಲಾ ಕೆಲಸಗಳನ್ನೂ ತಾವೇ ನಿರ್ವಹಿಸತಕ್ಕದ್ದು ಹಾಗೂ ಬೇರೆಯವರಿಂದ ಸೇವೆಯನ್ನು ಪಡೆಯುವಂತಿಲ್ಲ. ಅಗತ್ಯ ಶಕ್ತಿ ಸಾಮರ್ಥ್ಯವಿರುವ ಪ್ರತಿಯೊಬ್ಬ ವ್ಯಕ್ತಿಯೂ ಜೊತೆಜೊತೆಗೇ ನೆನಪಿನಲ್ಲಿಡಬೇಕಾದ ಸಂಗತಿ – ಅಶಕ್ತರು, ವೃದ್ಧರು, ಮಕ್ಕಳು ಮತ್ತು ಖಾಯಿಲೆಯವರ ಸೇವೆ ಮಾಡಲೇಬೇಕಾದುದು ಕರ್ತವ್ಯ ಎಂಬುದು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಸಬರಮತಿ ಆಶ್ರಮದಲ್ಲಿ ಯಾವುದೇ ನೌಕರರನ್ನೂ ನೇಮಕ ಮಾಡಲಾಗುವುದಿಲ್ಲ. ಒಂದು ಪಕ್ಷ ಅನಿವಾರ್ಯವಾಗಿ ನೇಮಕ ಮಾಡಿದಲ್ಲಿ ಅವರನ್ನು ಯಜಮಾನ – ನೌಕರ ಎಂಬ ಭಾವನೆಯಿಂದ ನಡೆಸಿಕೊಳ್ಳುವಂತಿಲ್ಲ. ಬದಲಾಗುತ್ತಿರುವ ಈಗಿನ ಸಾಮಾಜಿಕ ಸನ್ನಿವೇಶದಲ್ಲಿ ಇಂದಿನ ಯುವಪೀಳಿಗೆಗೆ ಈ ವಿಚಾರ ಬಹಳಷ್ಟು ಆದರ್ಶಪ್ರಾಯವಾದುದು. ತನ್ನ ಸ್ವಂತ ಸುಖ–ಸಂತೋಷಗಳಲ್ಲಿ ತಲ್ಲೀನರಾಗಿ ತಮ್ಮ ಕುಟುಂಬದ ಹಿರಿಯರು, ಮಕ್ಕಳುಗಳನ್ನೇ ಕಡೆಗಣಿಸುತ್ತಿರುವ ಈ ಸಂದರ್ಭದಲ್ಲಿ ಸೇವೆಯ ಮಹತ್ವವನ್ನು ಈ ಮೂಲಕ ಗಾಂಧಿಯವರು ಪ್ರತಿಪಾದಿಸಿದ್ದು ಎಲ್ಲರೂ ಅನುಸರಿಸಲೇ ಬೇಕಾದ ಆದರ್ಶವಲ್ಲವೇ?

ಅಂತೆಯೇ ದುಡಿಮೆಯಲ್ಲಿ ನಿರತನಾದ ವ್ಯಕ್ತಿ ಸಹಜವಾಗಿಯೇ ಸಮಾಜಕ್ಕೆ ಅಹಿತವಾದ ವಿಷಯಗಳ ಬಗ್ಗೆ ಯೋಚಿಸುವುದಿಲ್ಲ. ಅಂತಹವರ ಮಾನಸಿಕ, ದೈಹಿಕ ಆರೋಗ್ಯವೂ ಉತ್ತಮ ವಾಗಿರುತ್ತದೆ. ಕನ್ನಡದ ಪ್ರಸಿದ್ಧ ಕವಿ ಎಂ. ಗೋಪಾಲಕೃಷ್ಣ ಅಡಿಗರು ಹೇಳುತ್ತಾರೆ : "ಏನಾದರೂ ಮಾಡುತಿರು ತಮ್ಮ ಸುಮ್ಮನಿರಬೇಡ" ಎಂದು. ಇನ್ನು ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕೆಂಬ ನಿಯಮವನ್ನು ಗಾಂಧೀಜಿಯವರು ತಮ್ಮ ಜೀವನದಲ್ಲಿ ಸ್ವತಃ ಪಾಲಿಸುತ್ತಿದ್ದರು. ಎಷ್ಟರಮಟ್ಟಿಗೆ ಎಂದರೆ ಶೌಚಾಲಯಗಳನ್ನೂ ತಾವೇ ಸ್ವಚ್ಛಮಾಡುವುದರ ಮೂಲಕ ಎಲ್ಲರಿಗೂ ಆದರ್ಶವಾಗಿದ್ದಾರೆ. ಶಿಕ್ಷಕರು ಹಾಗೂ ಹಿರಿಯರು ಆ ಬಗ್ಗೆ ಗಮನಹರಿಸಿ ಯುವಕರಿಗೆ, ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದರ ಮೂಲಕ ಅವರ ಸಬರಮತಿ ಆಶ್ರಮದ ಈ ನಿಯಮವನ್ನು ಪಾಲಿಸುವಂತೆ ಮಾಡಲು ಪ್ರಯತ್ನಿಸೋಣ. ●

## ಮೂಢನಂಬಿಕೆಯಲ್ಲ ಇದು ಮೂಲ ನಂಬಿಕೆ

# ಕಾಮ ದಹನದ ಶುಭ ಕಾಮನೆಗಳು

'ಕಾಮದಹನ', 'ಹೋಲಿಕಾದಹನ', 'ರಂಗಪಂಚಮಿ' ಎಂದು ವಿವಿಧ ಹೆಸರಿನಿಂದ ಕರೆಯಲ್ಪಡುವ ಹಬ್ಬವೇ ಹೋಲಿ ಹುಣ್ಣಿಮೆ. ಮಾರ್ಚ್ 9 ರಂದು ಈ ಬಣ್ಣಗಳ ಸುಂದರ ಲೋಕ ಅರಳಲಿದೆ. ಯಾಂತ್ರಿಕತೆ ತುಂಬಿದ ಜೀವನದಲ್ಲಿ ಈ ಹಬ್ಬಗಳು ಎಲ್ಲರಿಗೂ ಜೀವನೋತ್ಸಾಹ ತುಂಬಿ ಮೌಲ್ಯಗಳ ವರ್ಧನೆ ಮಾಡುವುದರ ಜೊತೆಗೆ ಸೌಹಾರ್ದತೆಯ ಭಾವವನ್ನು ಬಲಪಡಿಸುವುದು ವಿಶೇಷ.

ಬಿರು ಬೇಸಿಗೆಯ ತಾಪಕ್ಕೆ ಹಸಿರಿನಿಂದ ನಳ ನಳಿಸುತ್ತ ಜೀವಚೇತನ ತುಂಬುವ ಪ್ರಕೃತಿ ಸೊರಗಿ ನಿಂತರೆ ಮನುಷ್ಯರ ಮೈ ಮನಗಳಿಗೆ ಜಡತ್ವದ ಛಾಯೆ ಆವರಿಸಿರುತ್ತದೆ. ಇಂತಹ ಸಮಯದಲ್ಲಿ ಸುತ್ತಲೂ ಚೈತನ್ಯ, ನವೋಲ್ಲಾಸ ತುಂಬುವ ಹೋಳಿಯ ಹಿನ್ನೆಲೆ ಅರಿತರೆ ಮತ್ತೆ ನಮ್ಮ ಜ್ಞಾತಿಗಳ ಜ್ಞಾನಕ್ಕೆ ತಲೆಬಾಗದೆ ಇರಲಾರಿರಿ.

ಪೌರಾಣಿಕ ಕಥಾನಕಗಳ ಪ್ರಕಾರ ದುಷ್ಟನಾದ ತಾರಕಾಸುರನೆಂಬ ರಾಕ್ಷಸನು ಬ್ರಹ್ಮನಿಂದ ತನಗೆ ಪಾರ್ವತಿ ಶಿವನ ಮಗನಿಂದಲೇ ಸಾವು ಬರುವಂತೆ ವರ ಕೋರುತ್ತಾನೆ. ಧ್ಯಾನ ಯೋಗದಲ್ಲಿ ಪರಶಿವನು ಲೀನನಾಗಿದ್ದು ಪರಶಿವನ ವಿವಾಹ ಸಂತಾನ ಅಸಾಧ್ಯವೆಂದೆ ಆತ ಭ್ರಮಿಸಿ ವರ ಪಡೆದಿದ್ದ. ಇತ್ತ ದೇವಾನುದೇವತೆಗಳು ರಾಕ್ಷಸನ ಉಪಟಳ ತಪ್ಪಿಸಿ ಲೋಕಕಲ್ಯಾಣವಾಗಲೆಂದು ರತಿ ಮನ್ಮಥರನ್ನು ಪರಶಿವನ ತಪೋಭಂಗ ಮಾಡಲು ಕೇಳುತ್ತಾರೆ. ಅನೇಕ ಪ್ರಯತ್ನಗಳ ನಂತರ ಮದನಾಸ್ತ್ರದಿಂದ ಶಿವನು ವಿಚಲಿನಾಗುವಂತೆ ಮಾಡುತ್ತಾನೆ. ಕೋಪೋದ್ರಿಕ್ತ ರುದ್ರನು ತನ್ನ ಮೂರನೇ ಕಣ್ಣು ತೆರೆದು ಮನ್ಮಥನನ್ನು ಸುಟ್ಟು ಹಾಕುತ್ತಾನೆ. ದುಃಖಿಗ್ರಸ್ತಳಾದ ರತಿ ಪರಿ ಪರಿಯಾಗಿ ಶಿವನಲ್ಲಿ ಪ್ರಾರ್ಥಿಸಿದಾಗ ಅವಳಿಗೆ ಮಾತ್ರ ಸಶರೀರಿಯಾಗಿ ಮದನನ್ನು ಕಾಣುವಂತೆ ಅನುಗ್ರಹಿಸಿ ಆತನ ಅಸ್ತಿತ್ವವನ್ನು ಜೀವಿತಗೊಳಿಸುತ್ತಾನೆ.

ಇಲ್ಲಿ ಮನ್ಮಥನು ಎಲ್ಲರ ಮನದೊಳಗೆ ಅಡಗಿರುವ ಕಾಮನೆ (ಆಸೆ)ಗಳ ಪ್ರತೀಕನಾಗಿದ್ದು, ಕೇವಲ ತನ್ನ ಅರಿಷಡ್ವರ್ಗಗಳ ಕಾಮನೆಗಳ ಪೂರೈಕೆಗೆ ತೊಡಗುವವರು ಮನಸ್ಸಿನ ಹಿಡಿತದಲ್ಲಿ ನಲುಗುವವರಾಗುತ್ತಾರೆ. ಯಾವುದೇ ಫಲಾಪೇಕ್ಷೆಯಿಲ್ಲದೆ ಕಾಮ, ಸ್ವಾರ್ಥ, ಅಪೇಕ್ಷೆಗಳಾಚೆ ಇರುವ ಶುದ್ಧ ಕಾಮನೆಗಳನ್ನು ಹೊಂದಿರುವವರು ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡ ಪಾರಮಾರ್ಥಿಕ ವ್ಯಕ್ತಿಗಳಾಗುತ್ತಾರೆ.

ಪರಶಿವನ 'ಮೂರನೇಕಣ್ಣು' ಅಂದರೆ ಇಲ್ಲಿ 'ಅಂತಃಚಕ್ಷು' ಆಗಿದೆ. ಬಾಹ್ಯದ ಕಣ್ಣಿಂದ ಕಾಣಿಸಲ್ಪಟ್ಟವುಗಳೆಡೆಗೆ ಮನಸ್ಸು ವಾಲಿದಾಗ ಅಂತರಾಳದ ಜ್ಞಾನದ ಅಕ್ಷಿಯಿಂದ ಅಂತಹ ಸಲ್ಲದವುಗಳನ್ನು ಕೊನೆಗಾಣಿಸುವುದೇ ಆಗಿದೆ. ರಾಜಸಿಕ, ತಾಮಸಿಕ, ರಜೋ ಗುಣಗಳ ಮೆಟ್ಟಿನಿಂತು ಇಂದ್ರಿಯ ಅತೀತ ಶಕ್ತಿ ಗಳಿಕೆಯನ್ನು ಸಾಧಿಸಿದ ಪರಶಿವನು ಇಲ್ಲಿ ಹುಚ್ಚು ಕುದುರೆಯಂತಿರುವ ಮನಸ್ಸಿಗೆ ಲಗಾಮು ಹಾಕಿ ದುಷ್ಟತೆಯ ಸಂಹಾರ ಮಾಡಿದ ಎಂಬುದೇ ಆಗಿದೆ.

ಇನ್ನೊಂದು ಕಥಾನಕದ ಪ್ರಕಾರ ರಾಕ್ಷಸ ರಾಜನಾದ ಹಿರಣ್ಯಕಶ್ಯಪವಿನ ಮಗ ಮೇರು ಹರಿಭಕ್ತನಾಗಿದ್ದು ಸಾತ್ವಿಕ ಗುಣಸಂಪನ್ನನಾಗಿದ್ದ. ಇದನ್ನು ಸಹಿಸದ ಹಿರಣ್ಯಕಶಪು ಮಗನನ್ನು ಕೊಲ್ಲಲು ತನ್ನ ತಂಗಿಯಾದ ಹೋಲಿಕಾಳನ್ನು ನೇಮಿಸಿದ. ಅಗ್ನಿಯಿಂದ ಯಾವುದೇ ತೊಂದರೆಯಾಗದೆಂಬ ವರ ಪಡೆದಿದ್ದ ಹೋಲಿಕಾಳು ಪ್ರಹ್ಲಾದನ ಸಮೇತ ಅಗ್ನಿಪ್ರವೇಶ ಮಾಡಿದಳು. ಆದರೆ ಅಲ್ಲಿ ಹೋಲಿಕಾಳು ಸಂಪೂರ್ಣ ದಹನಳಾಗಿ ಹೋಗುವಳು. ಭಕ್ತ ಪ್ರಹ್ಲಾದನು ಕಿಂಚಿತ್ತೂ ಘಾಸಿಗೊಳ್ಳದೆ ಹೊರಬರುತ್ತಾನೆ.

ಇನ್ನು ಈ ಹಬ್ಬವನ್ನು ಉತ್ತರ ಕರ್ನಾಟಕದ ಕೆಲಭಾಗಗಳಲ್ಲಿ ಐದು ದಿನಗಳವರೆಗೆ ಆಚರಿಸುತ್ತಾರೆ. ಗಲ್ಲಿ ಗಲ್ಲಿಗಳಲ್ಲಿ ರತಿ ಮನ್ಮಥರ ಗೊಂಬೆಗಳನ್ನು ಕೂರಿಸಿ ಪೂಜೆ ಮಾಡುವರು. ತಮಟೆ, ಡೋಲು ಸೇವೆ ಸಾಂಗವಾಗಿ ನಡೆಸಲ್ಪಡುತ್ತದೆ. ರಂಗ ಪಂಚಮಿ ದಿನ ಗೊಂಬೆಗಳನ್ನು ಮೆರವಣಿಗೆ ಒಯ್ಯಲಾಗುತ್ತದೆ. ಜೊತೆಗೆ ಎಲ್ಲರಿಗೂ ನೀರು, ಪಾನಕ ಬಣ್ಣ ಬ್ಯಾರಲ್‌ಗಳ ಮೂಲಕ ಹಂಚಲಾಗುತ್ತದೆ. ಕೆಲದಾನಿಗಳು ನೀರಿನ ಪಾನಕಗಳ ಅವಟಿಗೆ ತೆಗೆದಿರುತ್ತಾರೆ. ಗಿಜಿಗುಟ್ಟೋ ಜನಜಂಗುಳಿ ಯಾರು ಪರಿಚಿತರು ಯಾರು ಅಪರಿಚಿತರು ಗೊತ್ತೇ ಆಗದಂತೆ ಬಣ್ಣ ಎರಚಿ ಬಣ್ಣಗಳಲ್ಲೇ ಮುಳಗಿಬಿಟ್ಟಿರುತ್ತಾರೆ. ಯಾವುದೇ ಭೇದ ಭಾವವಿಲ್ಲದೇ ಎಲ್ಲರೂ ಒಂದೇ ಎಂದು ಸಾರುವ ಸೌಹಾರ್ದತೆಯ ಪ್ರೀತಿಯಲ್ಲಿ ಮಿಂದೇಳುವಂತೆ ಮಾಡುವ ಹಬ್ಬದ ಬಣ್ಣ ವರ್ಣಿಸಲಸದಳ. ಇಷ್ಟೆಲ್ಲಾ ಆಟ, ಹಾಡು, ಕುಣಿತ, ನೃತ್ಯ, ಬಣ್ಣ ಎರಚಾಟ ಮುಗಿದ ನಂತರ ಜನರೆಲ್ಲಾ ಸುಡಲು ಇಟ್ಟ ಉರುವಲುಗಳನ್ನೆಲ್ಲಾ ಪೇರಿಸಿಟ್ಟು ಸುತ್ತಲೂ ಕಬ್ಬಿನ ಜಲ್ಲೆ, ಜಾಡಲ ಟೊಂಗೆ, ತೆಂಗಿನಗರಿ, ಅಡಕೆಹಾಳೆ ಇಟ್ಟು ಪೂಜಿಸಿ ಅಗ್ನಿ ಸ್ಪರ್ಶ ಮಾಡಿ ಕಾಮನನನ್ನು ದಹಿಸುವರು. ಅಶುಭ ಕಾಮನೆಗಳು ಸುಟ್ಟು ಹೋಗಿ ಶುಭ ಕಾಮನೆಗಳು ಮೊಳೆಯಲಿ ಎನ್ನುವ ಬೇಡಿಕೆಯೊಂದಿಗೆ ಮನೆಗೆ ತೆರಳಿ ಸ್ನಾನಮಾಡಿ ಹಬ್ಬದೂಟ ಸವಿಯುವರು.

ಹಿಂದೆಲ್ಲಾ ರಾಸಾಯನಿಕ ಮುಕ್ತವಾದ ನೈಸರ್ಗಿಕ ಬಣ್ಣಗಳನ್ನು ತಯಾರಿಸುತ್ತಿದ್ದರು. ಅವುಗಳಲ್ಲಿನ ಔಷದೀಯ ಗುಣಗಳಿಂದ ಸಹಜವಾಗಿ ಬೇಸಿಗೆಯ ಕಾರಣದಿಂದ ಬರುತ್ತಿದ್ದ ಚರ್ಮರೋಗ, ಶುಷ್ಕತೆ, ಖಿನ್ನತೆ, ಮಾನಸಿಕ ಅಸಮತೋಲನೆ ಹಲವಾರು ರೋಗಗಳನ್ನು ನಿಯಂತ್ರಿಸಲು ಸಹಕಾರಿ ಆಗಿರುತ್ತಿತ್ತು.

ಆದರೀಗ ಬದಲಾದ ಕಾಲಘಟ್ಟದಲ್ಲಿ ಸ್ವಾರ್ಥ ವ್ಯಾಪಾರಿ ಮನೋಭಾವದಿಂದ ಚರ್ಮಕ್ಕೆ ಹಾನಿಕರವಾದ ರಾಸಾಯನಿಕಗಳನ್ನೊಳಗೊಂಡ ಬಣ್ಣಗಳು ಮಾರುಕಟ್ಟೆಗೆ ಬಂದಿವೆ. ಬಣ್ಣಗಳನ್ನು ಕೊಳ್ಳುವಾಗ ಎಚ್ಚರಿಕೆ ವಹಿಸಬೇಕಾಗಿದೆ. ಹಾಗೆಯೇ ದುರುದ್ದೇಶಪೂರಿತವಾಗಿ ಬಲವಂತವಾಗಿ ಬಣ್ಣ ಎರಚುವುದು ಸಲ್ಲ. ಜೋರಾಗಿ ಕಿವಿಗಡಚಿಕ್ಕುವಂತ ಸಂಗೀತ ಹಾಕಿಕೊಂಡು ಯಾವುದೋ ನಿರ್ದಿಷ್ಟ ಸ್ಥಳಗಳಲ್ಲಿ ಸಾಮೂಹಿಕ ಸನ್ನಿಗೊಳಗಾದವರಂತೆ ಕೃತಕ ಬಣ್ಣಗಳ ಮಳೆಯ ವ್ಯವಸ್ಥೆ ಮಾಡಿ ಅದರಡಿ ಕುಣಿಯುವುದೇ ಹಬ್ಬದ ಆಚರಣೆ ಎಂದು ಬಹುತೇಕ ಯುವ ಜನ ಭಾವಿಸಿದ್ದು ಕಂಡಾಗ ಖೇದವೆನಿಸದೆ ಇರಲಾರದು. ಮೂಲ ಹಬ್ಬದ ಆಶಯವೇ ಗೊತ್ತಿರದ ಜನರಿಗೆ ಇದು ಕೇವಲ ಮನರಂಜನೆಯ ಮಾಧ್ಯಮವಾಗಿದೆ ಅಷ್ಟೇ. ಇನ್ನೂ ಕೆಲ ಜನ ಮೊಬೈಲ್ ಮೂಲಕ ಯಾರೋ ಕಳಿಸಿದ ಹಬ್ಬದ ಸಂದೇಶಗಳನ್ನೇ ಇನ್ನೊಬ್ಬರಿಗೆ, ಮತ್ತೊಬ್ಬರಿಗೆ ಸಾಗಿಸುತ್ತಾ ಶುಭಾಶಯ ಕೋರುವ ರೀತಿ ಕಂಡಾಗ ಆತ್ಮೀಯ, ಆಪ್ತ ಭಾವನೆಗಳೇ ಲುಪ್ತವಾಗಿ ಅಲ್ಲಿ ಅನಿವಾರ್ಯತೆಯ ನಿರ್ಲಿಪ್ತತೆಯೇ ಕಾಣುವುದು. ಹಬ್ಬಗಳ ಉದ್ದೇಶ ಸದೃಢ, ಸ್ವಸ್ಥ ಮಾನಸಿಕ ವ್ಯಕ್ತಿತ್ವದ ವ್ಯಕ್ತಿಯು ಸದೃಢ ಸಮಾಜದ ನಿರ್ಮಾತೃ ಆಗಬಲ್ಲ ಎಂಬುದನ್ನು ಅರಿತು ಆ ನಿಟ್ಟಿನಲ್ಲಿ ವ್ಯಕ್ತಿ ನಿರ್ಮಾಣ ಮಾಡುವುದೇ ಆಗಿದೆ.

ಆಚರಣೆಗಳ ಹಿಂದಿನ ಸದಾಶಯ ಅರಿಯೋಣ. ಮುಂದಿನ ಪೀಳಿಗೆಯವರಿಗೂ ತಲುಪಿಸಬೇಕಾದದ್ದು ನಮ್ಮ ಕರ್ತವ್ಯ ಎಂಬುದನ್ನು ಮರೆಯದಿರೋಣ.

●


# ವಿವೇಕಾನಂದರ ಕನಸು ಸಾಕಾರಗೊಳಿಸಿದ ಆರ್.ಎಸ್.ಎಸ್.

## ಮಾ.ಸ. ಗೋಳ್ವಲ್‌ಕರ್‌ರವರ ಜನ್ಮದಿನದ ನಿಮಿತ್ತ ವಿಶೇಷ ಲೇಖನ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಸ್ವಾಮಿ ವಿವೇಕಾನಂದರು ತಮ್ಮ ಅಮೆರಿಕೆಯ ಪ್ರವಾಸದಲ್ಲಿ ಕಂಡುಕೊಂಡ ವಿಶೇಷವೆಂದರೆ ಅವರ ಮಾತುಗಳಲ್ಲೇ "ಸಂಘಟನೆ". ಸಂಘಟಿತ ಪ್ರಯತ್ನದಿಂದ ಎಷ್ಟೊಂದು ಕಾರ್ಯ ಸಾಧನೆಯಾಗುತ್ತದೆ ಎಂಬ ಮಾತನ್ನು ಅನೇಕ ಬಾರಿ ಉಚ್ಚರಿಸಿದ್ದಾರೆ. ಆದರೆ ಯಾವ ರೀತಿಯ ಸಂಘಟನೆ ಭಾರತೀಯ ಸ್ವಭಾವಕ್ಕೆ ಒಗ್ಗುತ್ತದೆ ಎಂಬುದರ ಬಗ್ಗೆ ಅವರು ಇನ್ನೂ ನಿರ್ಣಯಕ್ಕೆ ಬಂದಿರಲಿಲ್ಲ. ಆದರೆ ಹಿಂದುಗಳನ್ನು ಏಕಸೂತ್ರದಲ್ಲಿ ಪೋಣಿಸುವ ಕಾರ್ಯವಾಗಬೇಕೆಂಬುದು ಅವರ ಮನದಿಚ್ಛೆ ಆಗಿತ್ತು.



ಅವರ ಮನದಿಚ್ಛೆಯನ್ನು ಪೂರ್ಣಗೊಳಿಸಲು 1889ರ ಯುಗಾದಿಯ ಪರ್ವದಿನದಂದು ಭಾರತದ ಮಣ್ಣಿನಲ್ಲಿ ಮತ್ತೋರ್ವ ಮಹಾಪುರುಷ ಜನ್ಮ ತಳೆದ. ಆತನೇ ಕೇಶವ ಬಲಿರಾಮ ಹೆಡಗೆವಾರ್. 1902ರ ಜೂನ್‌ನಲ್ಲಿ ವಿವೇಕಾನಂದರು ಸ್ವರ್ಗಸ್ಥರಾದಾಗ ಕೇಶವನಿಗೆ 13 ವರ್ಷ. ತಮ್ಮ 36ನೇ ವಯಸ್ಸಿನವರೆಗೆ ರಾಷ್ಟ್ರಜೀವನದ ವಿವಿಧ ರಂಗಗಳಲ್ಲಿ ಕೆಲಸ ಮಾಡಿದ ಕೇಶವರಾವ್ ಕಂಡುಕೊಂಡ ಸತ್ಯವೂ, ಸ್ವಾಮೀಜಿ ಕಂಡ ಕನಸೂ ಒಂದೇ ಆಗಿತ್ತು. ಸ್ವಾಮೀಜಿಯವರ ಕನಸನ್ನು ನನಸು ಮಾಡುವ ದಿಕ್ಕಿನಲ್ಲಿ ಕೇಶವರಾವ್ 1925ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿ, 15 ವರ್ಷಗಳ ಕಾಲ ಅದನ್ನು ಪೋಷಿಸಿ ಅದನ್ನು ಬೆಳೆಸುವ ಜವಾಬ್ದಾರಿಯನ್ನು ಮಾಧವ ಸದಾಶಿವರಾವ್ ಗೋಳ್ವಾಲ್‌ಕರ್‌ಎಂಬ ತರುಣನ ಹೆಗಲಿಗೆ ಹೊರಿಸಿ 1940ರ ಜೂನ್‌ನಲ್ಲಿ ಸ್ವರ್ಗಸ್ಥರಾದರು.

ಮಾಧವ, ಸದಾಶಿವರಾವ್ ಹಾಗೂ ಲಕ್ಷ್ಮೀಬಾಯಿಯವರ ಸಂಸಾರಕ್ಕೆ ಕಾಲಿಟ್ಟಿದ್ದು **1906ರ ಫೆಬ್ರವರಿ 19ರಂದು**. ಅಂದರೆ ಮಾಘ ಬಹುಳ ಏಕಾದಶಿಯಂದು. ತಾಯಿಯ ಮುದ್ದು ಮಗ ಮಧು ಬಾಲ್ಯದಲ್ಲೇ ತಾಯಿಯ ಮೂಲಕ ಅನೇಕ ಶ್ಲೋಕಗಳು, ರಾಮರಕ್ಷಾಸ್ತೋತ್ರ, ರಾಮಾಯಣ, ಮಹಾಭಾರತದ ಕಥೆಗಳನ್ನು ಕೇಳಿ ಮನನ ಮಾಡಿಕೊಂಡಿದ್ದ. ತಂದೆ ಸದಾಶಿವರಾಯರು ಇಂಗ್ಲೀಷ್ ಶಾಲೆಯ ಅಧ್ಯಾಪಕರು.

ಒಮ್ಮೆ ಶಾಲೆಯ ಮುಖ್ಯೋಪಾಧ್ಯಾಯರು ತಮ್ಮ ಶಾಲೆಯ ತನಿಖೆಗಾಗಿ ಓರ್ವ ಅಧಿಕಾರಿ ಬರುವ ಕಾರಣ ಆತನ ಮುಂದೆ ಇಂಗ್ಲೀಷ್ ಭಾಷಣ ಮಾಡಲು ಓರ್ವ ವಿದ್ಯಾರ್ಥಿಯನ್ನು ತಯಾರು ಮಾಡಲು ಸದಾಶಿವರಾಯರಿಗೆ ಹೇಳಿದರು. ಸದಾಶಿವರಾಯರು ಮಾಧವನ ಅಣ್ಣ ಅಮೃತನಿಗೆ ಭಾಷಣ ಬರೆದು ಕೊಟ್ಟು ಅದನ್ನು ಕಂಠಪಾಠ ಮಾಡಿಸಿ ಉಚ್ಚಾರಣೆ ಸಹಿತ ಭಾಷಣ ಮಾಡುವ ರೀತಿಯನ್ನು ಕಲಿಸಿದರು. ಅಣ್ಣ ಭಾಷಣದ ಅಭ್ಯಾಸ ಮಾಡುತ್ತಿದ್ದರೆ, ತಮ್ಮನಾದ ಮಧು ಕೇಳಿಸಿಕೊಳ್ಳುತ್ತಿದ್ದ. ಭಾಷಣ ಮಾಡಬೇಕಾದ ದಿನ ಅಮೃತನಿಗೆ ವಿಪರೀತ ಜ್ವರ. ತಂದೆಗೆ ಗಾಬರಿ, ಮಧು ತಾನು ಭಾಷಣ ಮಾಡುವುದಾಗಿ ತಂದೆಯನ್ನು ಒಪ್ಪಿಸಿದ. ಅಂತೆಯೇ 4ನೇ ತರಗತಿಯ ಮಾಧವ ನಿರರ್ಗಳವಾಗಿ ಅಧಿಕಾರಿಯ ಮುಂದೆ ಭಾಷಣ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರನಾದ. ಹೀಗೆ ಅವನು ಬಾಲ್ಯದಿಂದಲೇ ಅತ್ಯಂತ ಪ್ರತಿಭಾಶಾಲಿ ವಿದ್ಯಾರ್ಥಿಯಾಗಿದ್ದ.

1922ರಲ್ಲಿ ಪೂನಾದ ಫರ್ಗುಸನ್ ಕಾಲೇಜಿಗೆ ವಿಜ್ಞಾನದ ವಿದ್ಯಾರ್ಥಿಯಾಗಿ ಸೇರಿ ಇಂಟರ್ ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ನಾಗಪುರದ ಹಿಸ್ಲಾಪ್ ಕಾಲೇಜಿಗೆ ಸೇರಿದ. ಮಿಷನರಿಗಳು ನಡೆಸುತ್ತಿದ್ದ ಹಿಸ್ಲಾಪ್ ಕಾಲೇಜಿನಲ್ಲಿ ಬೈಬಲ್ ಅಭ್ಯಾಸ ಕಡ್ಡಾಯವಾಗಿತ್ತು. ಮಾಧವರಾವ್ ಒಂದು ಬೈಬಲ್ ಪ್ರತಿಯನ್ನು ಕೊಂಡು ಒಂದೇ ವಾರದಲ್ಲಿ ಓದಿ ಮುಗಿಸಿ ಪ್ರತಿಪುಟವನ್ನು ಅರಗಿಸಿಕೊಂಡಿದ್ದರು. ಆಗಲೇ ಅವರನ್ನು ಪರೀಕ್ಷಿಸುವ ಒಂದು ಪ್ರಸಂಗ ಘಟಿಸಿದ್ದು.

ಪ್ರೊ॥ ಗಾರ್ಡಿನರ್ ತರಗತಿಯಲ್ಲಿ ಪಾಠ ಮಾಡುತ್ತ ಒಂದು ಸೂಕ್ತಿಯನ್ನು ಉದಾರಣೆಯಾಗಿ ಕೊಟ್ಟರು. ಕೂಡಲೇ ಮಾಧವರಾವ್ "ಸರ್ ನೀವು ಹೇಳಿದ ಉದಾಹರಣೆ ಹಂಗಲ್ಲ, ಅದು ಹೀಗಿರಬೇಕು" ಎಂದು ತಿದ್ದಿದರು. ಪ್ರೊಫೆಸರ್‌ಗೆ ಅನುಮಾನ ಬಂದು ಬೈಬಲ್ ಪ್ರತಿ ತರಿಸಿ ನೋಡಿದಾಗ ಮಾಧವರಾವ್ ಹೇಳಿದ್ದು ಸರಿಯಾಗಿತ್ತು. ನಿನ್ನ ಅಗಾಧ ಜ್ಞಾಪಕಶಕ್ತಿಗೆ ಅಭಿನಂದನೆಗಳು ಎಂದು ಗಾರ್ಡಿನರ್ ಶಹಾಬಾಸ್‌ಗಿರಿ ಕೊಟ್ಟರು.

1924ರಲ್ಲಿ ಇಂಟರ್ ಮುಗಿಸಿದ ಮಾಧವರಾಯರು ಕಾಶಿಯಲ್ಲಿನ "ಬನಾರಸ್ ವಿಶ್ವವಿದ್ಯಾಲಯ ಸೇರಿ 1926ರಲ್ಲಿ ಬಿಎಸ್ಸಿ ಮುಗಿಸಿ 1928ರಲ್ಲಿ ಪ್ರಾಣಿಶಾಸ್ತ್ರದಲ್ಲಿ ಎಂಎಸ್ಸಿಯನ್ನೂ ಮುಗಿಸಿದರು. ನಂತರ ಮದ್ರಾಸಿನ ಮತ್ಸ್ಯಾಲಯದಲ್ಲಿ ಮತ್ಸ್ಯಶಾಸ್ತ್ರದಲ್ಲಿ ಸಂಶೋಧನೆಗೆ ತೊಡಗಿದರು. ಅಷ್ಟರೊಳಗಾಗಲೇ ಅವರು ಸ್ವಾಮಿ ವಿವೇಕಾನಂದರ ಸಾಹಿತ್ಯವನ್ನು ಓದಿ ಜೀರ್ಣಿಸಿಕೊಂಡಿದ್ದರು. ಮನಸ್ಸು ಅಧ್ಯಾತ್ಮದ ಕಡೆ ಸೆಳೆಯುತ್ತಿತ್ತು. ಸಂಶೋಧನೆ ಮೊಟಕು ಗೊಳಿಸಿ ಮತ್ತೆ ಕಾಶಿವಿಶ್ವವಿದ್ಯಾಲಯಕ್ಕೆ

**ಪುಟ 7 ಕ್ಕೆ** ➢

➢ ಪುಟ 6 ರಿಂದ.....



ಅಧ್ಯಾಪಕರಾಗಿ ಬಂದು ಸೇರಿದರು. ನಿವೃತ್ತರಾಗಿದ್ದ ತಂದೆಯವರಿಗೂ ಸಮಾಧಾನ ವಾಯಿತು.

ಅಧ್ಯಾಪಕರಾಗಿದ್ದ ಮಾಧವ ರಾವ್ ಎಲ್ಲ ವಿದ್ಯಾರ್ಥಿಗಳ ಪ್ರೀತಿ ಪಾತ್ರ ಶಿಕ್ಷಕರಾಗಿ ಅವರಿಂದ 'ಗುರೂಜಿ' ಎಂಬ ಅಭಿದಾನವನ್ನು ಪಡೆದರು. ಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಫೀಸು ಕಟ್ಟುವುದು, ಪಠ್ಯಪುಸ್ತಕ ತೆಗೆದುಕೊಡುವುದು, ಅರ್ಥವಾಗದ ವಿಷಯವನ್ನು ಮನನ ಮಾಡಿಸುವುದು, ತನ್ನದಲ್ಲದ ವಿಷಯವಾದರೂ ಕೇಳಿ ಬಂದ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಿ ಮನದಟ್ಟು ಮಾಡಿಸುವುದರ ಮೂಲಕ ವಿದ್ಯಾರ್ಥಿಗಳು ಇಟ್ಟಿದ್ದ 'ಗುರೂಜಿ' ಹೆಸರನ್ನು ಸಾರ್ಥಕ ಪಡಿಸಿದರು. ಕಾಶಿಯಲ್ಲಿದ್ದಾಗಲೇ ಅವರಿಗೆ ಪ್ರೀತಿಯ ಶಿಷ್ಯ ಭಯ್ಯಾಜಿ ದಾಣೆಯವರ ಮೂಲಕ ಆರ್‌ಎಸ್‌ಎಸ್‌ನ ಪರಿಚಯವಾಯ್ತು. ಅಲ್ಲಿರುವಾಗಲೇ ಆರ್‌ಎಸ್‌ಎಸ್‌ನ ಸಂಸ್ಥಾಪಕರಾದ ಡಾ॥ಕೇಶವ ಬಲಿರಾಂ ಹೆಡಗೇವಾರರವರ ಭೇಟಿಯೂ ಆಯ್ತು. ಎರಡು ಮನಸ್ಸುಗಳೂ ಒಂದಾದವು, ಆರ್‌ಎಸ್‌ಎಸ್‌ನಲ್ಲಿ ಅಭಿರುಚಿ ಮೂಡಿತು, ಕಾಶಿಯಲ್ಲೇ ಸಂಘದ ಶಾಖೆಗೆ ಬರಲು ಪ್ರಾರಂಭಿಸಿದರು.

ಕಾಶಿಯಲ್ಲಿ 3 ವರ್ಷ ಅಧ್ಯಾಪಕರಾಗಿದ್ದ ಗುರೂಜಿ ಒಪ್ಪಂದ ಮುಗಿದಾಗ ನಾಗಪುರಕ್ಕೆ ಬಂದು ವಕೀಲಿ ವಿದ್ಯೆ ಕಲಿತು, 1935ರಲ್ಲಿ ಕೆಲವು ಕಾಲ ವಕೀಲ ವೃತ್ತಿಯನ್ನು ಮಾಡಿದರು. ಆಗ ಸಂಘಸ್ಥಾಪಕ ಡಾ॥ ಜಿ. ಯವರ ಸಹವಾಸ ಹೆಚ್ಚಾಯಿತು. ಆದರೆ ಗುರೂಜಿಯವರಿಗೆ ಆಧ್ಯಾತ್ಮದ ಸೆಳೆತ ಹೆಚ್ಚಾಗಿ 1936ರ ಅಕ್ಟೋಬರ್‌ನಲ್ಲಿ ನಾಗಪುರದ ರಾಮಕೃಷ್ಣಾಶ್ರಮದ ಸ್ವಾಮೀಜಿ ಅಮೂರ್ತಾನಂದರ ಜತೆ ಸಾರಗಾಛಿ ಯಲ್ಲಿದ್ದ ವಿವೇಕಾನಂದರ ಗುರುಭಾಯಿ, ರಾಮಕೃಷ್ಣಪರಮಹಂಸರ ನೇರಶಿಷ್ಯ ಸ್ವಾಮಿ ಅಖಂಡಾನಂದರ ಶಿಷ್ಯತ್ವ ಸ್ವೀಕರಿಸಲು ಹೊರಟರು. ಮಾಧವರಾವ್‌ಗೆ ಅಖಂಡಾನಂದರಿಂದ ದೀಕ್ಷೆ ದೊರೆಯಿತು. ಗುರು ಸೇವೆಯಲ್ಲಿ ಸಾರ್ಥಕ್ಯ ಕಂಡರು. ಆದರೆ ಅಖಂಡಾನಂದರ ಆರೋಗ್ಯ ಕ್ಷೀಣಿಸಿ ಕಲ್ಕತ್ತೆಯ ಶಾರದಾ ಉದ್ಬೋದನ ಮಂದಿರದಲ್ಲಿ 1937ರ ಫೆಬ್ರವರಿಯಲ್ಲಿ ನಿರ್ವಾಣ ಹೊಂದಿದರು.

ಮಾಧವರಾವ್ 1937ರ ಮಾರ್ಚ್‌ನಲ್ಲಿ ನಾಗಪುರಕ್ಕೆ ಹಿಂದಿರುಗಿದರು. ಮನಸ್ಸಿನಲ್ಲಿ ತಮ್ಮ ಗುರುಗಳ ಜೀವನ ರಹಸ್ಯ ತೋರಿಸುವ ಶ್ಲೋಕ

**ನತ್ವಹಂ ಕಾಮಯೇ ರಾಜ್ಯಂ । ನ ಸ್ವರ್ಗಂ ನಾ ಪುನರ್ಭವಮ್**
**ಕಾಮಯೇದುಃಖ ತಪ್ತಾನಾಂ । ಪ್ರಾಣಿನಾಂ ಆರ್ತಿನಾಶನಮ್॥**

ಸದಾ ಸ್ಫುರಿಸುತ್ತಿತ್ತು. ಜೀವನವನ್ನು ಸಮಾಜ ಸೇವೆಗೆ ಮುಡಿಪಿಡುವ ನಿರ್ಧಾರ ಗಟ್ಟಿಯಾಯಿತು. ಅದೇ ವೇಳೆಗೆ ಡಾಕ್ಟರ್‌ಜೀಯವರ ಸಂಪರ್ಕ ಸಹವಾಸ ಮತ್ತೆ ದೊರಕಿತು. ಡಾ॥ ಜಿಯವರ ಪ್ರೀತಿ, ಪ್ರೇಮ, ಸಾಮಾಜಿಕ ಕಳಕಳಿ ವಿವೇಕಾನಂದರ 'ಹಿಂದು ಸಂಘಟನೆ' ಯ ಕನಸನ್ನು ನನಸು ಮಾಡುವ ದೃಢ ಮನಸ್ಸು ಗುರೂಜಿಯವರನ್ನು ಸೂಜಿಗಲ್ಲಿನಂತೆ ಆಕರ್ಷಿಸಿತು. 1937ರಿಂದ ಮುಂದಿನ ಮೂರು ವರ್ಷ ಗುರೂಜಿ, ಡಾಕ್ಟರ್‌ಜೀ ಅವರ ಮೂಸೆಯಲ್ಲಿ ಕರಗಿದ ಬಂಗಾರದಂತೆ ಆದರು.

1940ರ ಪ್ರಾರಂಭದಲ್ಲೆ ಡಾ॥ ಜಿವರ ಆರೋಗ್ಯ ಕುಸಿಯಿತು. ಗೂರೂಜಿ ಅವರ ಶುಶ್ರೂಷೆಗೆ ನಡುಕಟ್ಟಿದರು. ಇದೇ ಸಮಯದಲ್ಲೇ ಡಾ॥ ಜಿ "ಆರ್‌ಎಸ್‌ಎಸ್‌ನ ಸಂಪೂರ್ಣ ಹೊಣೆಗಾರಿಕೆಯನ್ನು ನೀವು ನಿರ್ವಹಿಸಬೇಕೆಂದು" ಗುರೂಜಿಯವರನ್ನು ಕೇಳಿಕೊಂಡದ್ದು. 1940ರ ಜೂನ್ 21 ರಂದು ಡಾ॥ ಜಿ ಇಹಲೋಕ ತ್ಯಜಿಸಿದರು. ಒಂದು ದೃಷ್ಟಿಯಲ್ಲಿ ಪರಮಹಂಸರು ತಮ್ಮ ತಪಃಶ್ಶಕ್ತಿಯನ್ನು ನರೇಂದ್ರನಿಗೆ ಧಾರೆ ಎರದಂತೆ ಡಾ॥ ಹೆಡಗೆವಾರರು ತಮ್ಮ ತಪಃಶಕ್ತಿಯನ್ನು ಗುರೂಜಿಯವರಿಗೆ ಧಾರೆ ಎರೆದರು. ಗುರೂಜಿ ಆರ್‌ಎಸ್‌ಎಸ್ ಮುಖ್ಯಸ್ಥರಾದರು. 1940 ರಿಂದ 1973ರ ವರೆಗೆ 33 ವರ್ಷಗಳ ಕಾಲ ಭಾರತವನ್ನು ಭ್ರಮಣ ಮಾಡಿ ಲಕ್ಷಾವಧಿ ಕಾರ್ಯಕರ್ತರನ್ನು ನಿರ್ಮಿಸಿದರು.

ಹಿಂದು ಸಂಘಟನೆಯ ಸ್ವರೂಪ ಹೇಗಿರಬೇಕು? ಇದಕ್ಕಾಗಿ ಡಾ॥ಜಿ ಕಂಡು ಕೊಂಡ ಮಾರ್ಗ 'ನಿತ್ಯಶಾಖೆ'. ನಿತ್ಯಶಾಖೆ ಎಂದರೆ ಪ್ರತಿನಿತ್ಯ 1 ಗಂಟೆಯ ಕಾಲ ಒಂದು ನಿಶ್ಚಿತ ಸಮಯದಲ್ಲಿ ಬಾಲವೃದ್ಧ ತರುಣರಾದಿಯಾಗಿ ಎಲ್ಲರೂ ಸೇರುವುದು. ಅಲ್ಲಿ ಭಾರತೀಯ ಆಟಗಳು ಕಬಡ್ಡಿ, ಯೋಗ ಮುಂತಾದ ಶಾರೀರಿಕ ಕಾರ್ಯಕ್ರಮಗಳ ಮೂಲಕ ಶರೀರವನ್ನು ದೃಢಗೊಳಿಸಿಕೊಳ್ಳುವುದು, ಮತ್ತೆ ಶ್ಲೋಕ, ದೇಶಭಕ್ತಿ ಗೀತೆ, ರಾಷ್ಟ್ರೀಯ ವಿಚಾರಗಳ ಬಗ್ಗೆ ಚರ್ಚೆಗಳ ಮೂಲಕ ಮಾನಸಿಕ, ಬೌದ್ಧಿಕ ಸಂಸ್ಕಾರವನ್ನು ಪಡೆಯುವುದು. ಕೊನೆಯಲ್ಲಿ ಹೇ ಮಾತೃ ಭೂಮಿಯೇ ನಿನ್ನ ಪರಮ ವೈಭವದ ಪ್ರಾಪ್ತಿಗಾಗಿ ಈ ನನ್ನ ಶರೀರ ಮುಡಿಪಾಗಲಿ ಎಂದು ಭಾರತ ಮಾತೆಗೆ ಜೈಕಾರ ಹಾಕುತ್ತಾ ಪ್ರಾರ್ಥಿಸುವುದು ಶಾಖೆ ಎಂದರೆ ಇಷ್ಟೇ ಸರಳ ಕಾರ್ಯತಂತ್ರ. ಜಾತಿ ಮತ ಭೇದವಿಲ್ಲದೆ ಹೀಗೆ ಸೇರುವುದರಿಂದ ಹೃದಯಗಳು ಬೆಸೆಯಲ್ಪಡುತ್ತದೆ. ನಾವೆಲ್ಲ ಹಿಂದು, ನಾವೆಲ್ಲ ಬಂಧು ಎಂಬ ಏಕಭಾವ ಉದಯಿಸುತ್ತದೆ. ಇದರ ಜತೆ ಜತೆಗೆ ಸ್ವಂತಕ್ಕಿಂತ ದೇಶಹಿತ ಹೆಚ್ಚು ಎಂಬ ಜಾಗೃತಿ ಉಂಟಾಗುತ್ತದೆ.

ಗುರೂಜಿಯವರು ತಮ್ಮ ಪ್ರವಾಸದಲ್ಲಿ ಸದಾ ಒತ್ತಿ ಹೇಳುತ್ತಿದ್ದುದು ಇದೇ ಸರಳ ವಿಚಾರ "ನಿಮ್ಮೂರಿನಲ್ಲಿ ಶಾಖೆ ನಡೆಯುತ್ತದೆಯೇ? ಎಷ್ಟು ಜನ ಸೇರುತ್ತಾರೆ? ಯಾವ ಆಟ ಆಡುವಿರಿ? ಪ್ರಾರ್ಥನೆ ಮಾಡುವಿರಾ?" ಈ ಸರಳ ಪ್ರಶ್ನೆಗಳ ಮೂಲಕ ಸ್ವಯಂಸೇವಕರನ್ನು ಜಾಗೃತಗೊಳಿಸುತ್ತಿದ್ದರು.

1948ರಲ್ಲಿ ಪಾಕಿಸ್ತಾನ ಕಾಶ್ಮೀರದ ಮೇಲೆ ದಾಳಿ ಮಾಡಿದಾಗ ಶ್ರೀನಗರದ ವಿಮಾನ ನಿಲ್ದಾಣ ಮಂಜಿನಿಂದ ಕೂಡಿತ್ತು. ಕೂಡಲೇ ಸಂಘದ ಸ್ವಯಂಸೇವಕರು ಹಗಲು ರಾತ್ರಿ ಶ್ರಮವಹಿಸಿ ಭಾರತೀಯ

ಪುಟ 9 ಕ್ಕೆ ➢

**ಮೌಲ್ಯೋಪಾಸನೆ**

# ಪ್ರಕೃತಿಯಿಂದ ಪಾಠ

■ **ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಮೌಲ್ಯೋಪಾಸನೆ ಶೀರ್ಷಿಕೆ ಅಡಿಯಲ್ಲಿ ಕೆಲವು ಕಥೆಗಳನ್ನು ಸ್ಮರಿಸುತ್ತಾ ಬಂದಿದ್ದೇವೆ. ಹೀಗೆ ಜೀವನಮೌಲ್ಯಗಳನ್ನು ತಿಳಿಸುವ ಮಾನವಜನ್ಮದ ಸಾರ್ಥಕತೆಯ ದಾರಿ ತೋರಿಸುವ ಅನೇಕ ಕಥೆಗಳು ನಮ್ಮ ಪುರಾಣ, ಉಪನಿಷತ್ತುಗಳಲ್ಲಿ ಮಾತ್ರವಲ್ಲ, ಚರಿತ್ರೆಯಲ್ಲಿ ಕೂಡ ದೃಷ್ಟಾಂತಗಳು ಸಮೃದ್ಧವಾಗಿವೆ. ಅವುಗಳನ್ನು ತಿಳಿದು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಜ್ಞಾವಂತಿಕೆ ನಮ್ಮಲ್ಲಿರಬೇಕು. ಅವುಗಳಲ್ಲಿನ ತಿರುಳನ್ನು ಗ್ರಹಿಸುವ ಆಸಕ್ತಿ, ಶ್ರದ್ಧೆ, ಸೂಕ್ಷ್ಮತೆ ಇದ್ದರೆ ಮಾತ್ರ ಅವುಗಳ ಅರಿವು ಹಾಗೂ ಪ್ರಯೋಗ ಎರಡೂ ಸಾಧ್ಯವಾಗುತ್ತದೆ. ಮೊದಲನೆಯದಾಗಿ ನಮ್ಮಲ್ಲಿ ಇವೆಲ್ಲದರ ಕುರಿತು ಕುತೂಹಲ ಸ್ವಭಾವ ಜಾಗೃತವಾಗಬೇಕು.

ಜೀವನ ಮೌಲ್ಯಗಳನ್ನು ಕಲಿಯುವಲ್ಲಿ ಪ್ರಕೃತಿಯು ವಹಿಸುವ ಪಾತ್ರವೂ ಮಹತ್ತ್ವದ್ದಾಗಿರುತ್ತದೆ. ಏಕೆಂದರೆ ಪ್ರಕೃತಿಯಿಲ್ಲದೆ ಜೀವಿಗಳಿಲ್ಲ, ಜೀವಿಗಳಿಲ್ಲದೆ ಪ್ರಕೃತಿಯಿಲ್ಲ. ಅದರ ಹಲವು ರೂಪಗಳು ನಮಗೆ ಕಲಿಸುವ ಪಾಠ ಯಾವ ಶಿಕ್ಷಣ ಸಂಸ್ಥೆಗಿಂತಲೂ ಕಡಿಮೆಯದಲ್ಲ. ಆಕಾಶದೆತ್ತರಕ್ಕೆ ಬೆಳೆದು ನಿಂತು ಮುಗಿಲನ್ನೇ ಮುಟ್ಟುವಂತಿರುವ ಮರಗಳು 'ನಾನೇರುವೆತ್ತರಕೆ ನೀನೇರಬಲ್ಲೆಯಾ?' (ವರಕವಿ ಬೇಂದ್ರೆಯವರ ಸಾಲುಗಳನ್ನು ಕೃತಜ್ಞತೆಯೊಂದಿಗೆ ಉದ್ಧರಿಸುತ್ತ) ಎಂದು ಹೇಳುತ್ತ ಮನುಷ್ಯನ ಅಹಂಕಾರಕ್ಕೆ ಬಲವಾದ ಪೆಟ್ಟನ್ನು ನೀಡುತ್ತವೆ. ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ವಿನಯ ಪೂರಕವೆಂಬ ಅಂಶವನ್ನು ಹೇಳುತ್ತವೆ. ಹಾಗೆಯೇ ಸಮುದ್ರದ ವೈಶಾಲ್ಯ, ಪರ್ವತಗಳ ಔನ್ನತ್ಯ ತಮ್ಮ ಬೃಹತ್ತಾದ, ಮಹತ್ತರವಾದ ಘನತೆ, ಗಾಂಭೀರ್ಯಗಳೆಂಬ ಲಕ್ಷಣಗಳೊಂದಿಗೆ ಮನುಷ್ಯ ಶಕ್ತಿಯ ಮಿತಿಯನ್ನು ಮತ್ತೆ ಮತ್ತೆ ಹೇಳುತ್ತ ಆತ ಎಂದಿಗೂ ಪ್ರಕೃತಿಯೆಂಬ ಅತಿಮಾನವ ಶಕ್ತಿಯ, ಸಹಜ ಶಕ್ತಿಯ ಎದುರು ತಲೆಬಾಗಲೇಬೇಕೆಂಬ ಸತ್ಯದ ಅರಿವು ನೀಡುತ್ತದೆ.

ಸೃಷ್ಟಿಯಲ್ಲಿರುವ ಚರಾಚರ ವಸ್ತುಗಳ, ಜೀವಿಗಳ ವೈವಿಧ್ಯ, ಅವುಗಳಲ್ಲಿನ ಸಾಮರಸ್ಯ ಎಲ್ಲವೂ ಸಮಾಜದಲ್ಲಿ ಹೊಂದಾಣಿಕೆಯ ಮನೋಭಾವದೊಂದಿಗೇ ಇತರರೊಂದಿಗೆ ಬದುಕಬೇಕೆಂಬುದನ್ನು ಉಪದೇಶಿಸುತ್ತದೆ. ವನರಾಶಿಯ ಪರಿಸರಕ್ಕೆ ಪ್ರವೇಶಿಸಿದೊಡನೆಯೇ ಗಮನ ಸೆಳೆಯುವುದೆಂದರೆ ಅತಿದೊಡ್ಡ ಮರಗಳ ನಡುವೆಯೇ ಅತಿಸಣ್ಣಗಿಡಗಳೂ ತಲೆಯೆತ್ತಿರುತ್ತವೆ. ಆಸರೆಗೆಂದು ಮರಗಳನ್ನು ಹಬ್ಬಿನಿಂತ ಬಳ್ಳಿಗೂ ತಮ್ಮ ನಡುವಿನ ಸ್ನೇಹಭಾವವನ್ನು ತೋರುತ್ತವೆ. ಇವುಗಳಲ್ಲಿ ಯಾವುದೇ ಭೇದ ಭಾವವಿಲ್ಲ, ಬಲಿಷ್ಠ, ದುರ್ಬಲವೆಂಬ ತಾರತಮ್ಯ ಭಾವವಿಲ್ಲ, ಜಾತಿ, ವರ್ಗ ಭೇದವಿಲ್ಲದೆ ಒಂದಾಗಿ ಬಾಳುವ ಪರಿಯನ್ನು ಗಮನಿಸಿದಾಗ ಅಲ್ಲಿ ತಿಳಿಯುವುದು ಬೆಲೆಕಟ್ಟಲಾಗದ ಜೀವನಪಾಠ ತಾನೆ? ಸಹಕಾರ ಮನೋಭಾವದೊಂದಿಗೆ ಬೆಳೆದು ನಿಂತು ಸೃಷ್ಟಿಯ ಚೆಲುವಿಗೆ ಮಾತ್ರವಲ್ಲ ಸಾಮರಸ್ಯವೆಂಬ ನೀತಿಗೂ ತಮ್ಮ ಕಾಣಿಕೆಯನ್ನು ಇವು ನೀಡುತ್ತಲೇ ಬಂದಿದೆ.

ಸ್ವಾದಿಷ್ಟವಾದ ಹಣ್ಣನ್ನು ನೀಡುವ ಮರಗಳಾಗಲೀ, ಸುಂದರವಾದ ಪರಿಮಳಭರಿತವಾದ ಪುಷ್ಪಗಳನ್ನು ನೀಡುತ್ತಿರುವ ಗಿಡಗಳಾಗಲೀ ನಿಷ್ಕಾಮಕರ್ಮದ ಪಾಠವನ್ನು ಬೋಧಿಸುತ್ತವೆ. ಮನಸ್ಸಿಗೆ ಆಹ್ಲಾದವನ್ನು, ದೇಹಕ್ಕೆ ಹಿತವನ್ನು ನೀಡುವ ಕಾರ್ಯದ ಮಹತ್ತ್ವವನ್ನು ತಿಳಿಸುವುದರೊಂದಿಗೆ ಇತರರ ಒಳಿತನ್ನೇ ಬಯಸುವ ಗುಣ ಅತಿಮುಖ್ಯವೆಂಬ ತತ್ತ್ವವೂ ಇಲ್ಲಿರುತ್ತದೆ. ಅಷ್ಟೇ ಅಲ್ಲ, ಒಂದು ಬೊಗಸೆ ನೀರನ್ನು ಒಣಗುತ್ತಿರುವ ಗಿಡಕ್ಕೆ ಹನಿಸಿದ ಕೂಡಲೇ ಅದು ಕೃತಜ್ಞತಾಪೂರ್ವಕವಾಗಿ ತೂಗಾಡಲಾರಂಭಿಸುತ್ತದೆಯಲ್ಲ, ಅಲ್ಲಿದೆ ಉಪಕಾರ ಸ್ಮರಣೆಯ ಕೃತಜ್ಞತೆಯ ಸಂಕೇತ ಮತ್ತು ಭಾವ.

ರಸ್ತೆಬದಿಯಲ್ಲಿ ಬೆಳೆದು ನಿಂತ ವಿರಾಟ್‌ವೃಕ್ಷಗಳು ಯಾರೇ ತಮ್ಮ ಆಸರೆಗೆ ಬಂದರೂ ಭೇದಭಾವ ತೋರದೆ ನೆರಳನ್ನು ನೀಡಿ ವಿಶ್ರಾಂತಿ ಸುಖವನ್ನು ಒದಗಿಸುತ್ತವೆ. ಇವಕ್ಕೆ ಜಾತ್ಯತೀತವೆಂಬ ಶಬ್ದದ ಪರಿಚಯವನ್ನು ಮಾಡಿಕೊಟ್ಟವರಾರು? ಸಹಾಯವನ್ನು ಅಪೇಕ್ಷಿಸಿ ತಮ್ಮ ಬಳಿಗೆ ಬಂದವರಿಗೆ ನಿಷ್ಪಕ್ಷಪಾತ ದೃಷ್ಟಿಯಿಂದ ಸ್ಪಂದಿಸಬೇಕೆಂಬ ಪಾಠವನ್ನೇ ತಾನೆ ಇವು ಕಲಿಸುತ್ತವೆ? ಹೀಗೆ ಗಮನಿಸುತ್ತಾ ಹೋದರೆ ನಮ್ಮ ಸುತ್ತಮುತ್ತ, ದಿನನಿತ್ಯ ಕಂಡುಬರುವ ಹತ್ತಾರು ಸಣ್ಣ ಪುಟ್ಟ ಸಂಗತಿಗಳೂ ಸಹ ನಮ್ಮನ್ನು ತಿದ್ದುವ, ಕಲಿಸುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ. ನೋಡುವ ಕಣ್ಣು, ಕೇಳುವ ಕಿವಿ, ಅರಿಯುವ ಮನಸ್ಸು, ಅಳವಡಿಸಿಕೊಳ್ಳುವ ಆಸಕ್ತಿ, ಪ್ರಜ್ಞೆ ನಮ್ಮಲ್ಲಿರಬೇಕಷ್ಟೆ.

ಜೀವನಮೌಲ್ಯಗಳನ್ನು ಯಾವ ಶಾಲೆಯಲ್ಲಿಯೇ ಹೋಗಿ ಕಲಿಯಬೇಕೆಂದಿಲ್ಲ. ಸರಿಯಾದ ಮಾರ್ಗದರ್ಶಕರಿಲ್ಲವೆಂದು ಚಿಂತಿಸಬೇಕಿಲ್ಲ. ಪಠ್ಯಸೂಚಿಯಲ್ಲಿ ಅಳವಡಿಸಲಿಲ್ಲವೆಂದು ನಿರಾಶರಾಗಬೇಕಿಲ್ಲ, ಜಗತ್ತೇ ನಮ್ಮ ಶಿಕ್ಷಣಶಾಲೆ. ಅಲ್ಲಿ ಪ್ರತಿದಿನ, ಪ್ರತಿ ಕ್ಷಣ ನಾವು ವಿದ್ಯಾರ್ಥಿಗಳೆಂಬುದನ್ನು ಮರೆಯಬಾರದಷ್ಟೆ. ಅಲ್ಲಿನ ಕಲಿಕೆಯಲ್ಲಿ ಶ್ರದ್ಧೆ, ಆಸಕ್ತಿಗಳೊಂದಿಗೆ ಪ್ರಾಮಾಣಿಕ ಪ್ರಯತ್ನಗಳೂ ಮುಖ್ಯವೆಂಬುದು ಕೂಡ ಸದಾ ಸ್ಮರಣೆಯಲಿರಬೇಕು.

ಜಗತ್ತಿನ ಲಕ್ಷಾಂತರ ಜೀವಿಗಳಲ್ಲಿ ಅದೆಷ್ಟೋ ಜೀವಿಗಳಿಂದಲೂ ನಾವು ಕಲಿಯುವ ಪಾಠವಿದ್ದೇ ಇರುತ್ತದೆ. ಧೈರ್ಯ, ತಾಳ್ಮೆ, ಶಾಂತಿಯ ಜೊತೆಗೆ ಗುರಿಮುಟ್ಟುವ ಛಲವನ್ನು ಕಲಿಸುವ ಜೀವ, ಜಂತುಗಳೂ ಇಲ್ಲಿವೆ. ಆನೆಯಂತಹ ಧೀರ, ಗಂಭೀರ ಪ್ರಾಣಿಯಿಂದ ಇರುವೆಯಂತಹ, ಜೇಡದಂತಹ ಸಣ್ಣ ಸಣ್ಣಕ್ರಿಮಿ ಕೂಡ ನಮ್ಮ ಪಾಲಿಗೆ ಮೌಲ್ಯವನ್ನು ಕಲಿಸುವ ಗುರುವಾಗುತ್ತದೆ.

ಮೌಲ್ಯೋಪಾಸನೆಗೆ ಹಲವು ದಾರಿಗಳು, ನಮ್ಮ ಜಾಗೃತಪ್ರಜ್ಞೆ ಅವುಗಳನ್ನು ಗುರುತಿಸಬೇಕು. ●

ಸ್ತ್ರೀಯರೆಲ್ಲರೂ ಜಗನ್ಮಾಯಿಯ ಅಂಶಗಳು. ಆದ ಕಾರಣ ಎಲ್ಲರೂ ಅವರನ್ನು ತಾಯಿಯಂತೆ ಭಾವಿಸಬೇಕು.

# ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಫೋನ್– ಇನ್ ಕಾರ್ಯಕ್ರಮ ವಿನೂತನ ತಂತ್ರ

ಎಸ್.ಎಸ್.ಎಲ್.ಸಿ ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿದ್ದು, ಮುಂದಿನ ವಿದ್ಯಾರ್ಥಿ ಜೀವನಕ್ಕೆ ಆಧಾರವಾಗಿದೆ. ಫಲಿತಾಂಶ ಸುಧಾರಣೆಗಾಗಿ ಸರ್ಕಾರ ಸಾಕಷ್ಟು ಹಣ ವೆಚ್ಚ ಮಾಡಿ ಅನೇಕ ಯೋಜನೆ, ಕಾರ್ಯಕ್ರಮಗಳನ್ನು ಜಾರಿ ಗೊಳಿಸುತ್ತಿದೆ. ಅದರಲ್ಲಿ ಪೋನ್– ಇನ್ ಕಾರ್ಯಕ್ರಮವು ಇಡಿ ರಾಜ್ಯದಲ್ಲಿಯೇ ವಿನೂತನ ಹಾಗೂ ವಿದ್ಯಾರ್ಥಿಮುಖಿ ಕಾರ್ಯಕ್ರಮವಾಗಿದೆಯೆಂದು ನಿಕಟಪೂರ್ವ ಡಿಡಿಪಿಐ, ಜಮಖಂಡಿ ಸರ್ಕಾರಿ ಬಿಎಡ್ ಕಾಲೇಜಿನ ಪ್ರಾಚಾಕ ಶಾಂತಗೌಡ ಪಾಟೀಲ ಅಭಿಮತ ವ್ಯಕ್ತಪಡಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ, ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಘಟಕ, ಜ್ಞಾನಾಮೃತ ಶೈಕ್ಷಣಿಕ, ವೃತ್ತಿ ಮಾರ್ಗದರ್ಶನ ಕೇಂದ್ರ, ಮಿಲೇನಿಯಂ ಕನ್ನಡ, ಆಂಗ್ಲ ಮಾಧ್ಯಮ ಶಾಲೆ ಮತ್ತು ಕಾಲೇಜು ಇವುಗಳ ಸಂಯುಕ್ತ ಆಶ್ರಯದಲ್ಲಿ ಕಳೆದ ಜ 1 ರಿಂದ ನಿರಂತರವಾಗಿ 55 ದಿವಸಗಳ ಕಾಲ ದಿನನಿತ್ಯ ಸಂಜೆ 7 ರಿಂದ 9 ಗಂಟೆಯವರೆಗೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಫೋನ್ ಇನ್ ಕಾರ್ಯಕ್ರಮ ಮಂಗಳವಾರ ಸಂಜೆ ಜರುಗಿದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳಲ್ಲಿರುವ ವಿಷಯದ ಅನೇಕ ಸಂಶಯಗಳನ್ನು ನುರಿತ ಶಿಕ್ಷಕರು ನಿವಾರಿಸಿದ್ದಾರೆ. ಈ ಕಾರ್ಯಕ್ರಮ ಕೇವಲ ಜಿಲ್ಲೆಗೆ ಮಾತ್ರ ಸೀಮಿತವಾಗದೆ, ಇಡಿ ರಾಜ್ಯದ ಮೂಲೆಗಳಿಂದ ಅನೇಕ ವಿದ್ಯಾರ್ಥಿಗಳು ಕರೆ ಮಾಡಿ ತಮ್ಮ ಸಂಶಯ ನಿವಾರಿಸಿ ಕೊಂಡಿದ್ದಾರೆ. ಶಿಕ್ಷಕರು ಈ ಕಾರ್ಯವನ್ನು ತುಂಬಾ ಆಸಕ್ತಿಯಿಂದ ನೆರವೇರಿಸುವ ಮೂಲಕ ಪ್ರಸ್ತುತ ವರ್ಷದ ಫಲಿತಾಂಶ ಹೆಚ್ಚಳಗೊಳಿಸುವ ಗುರಿಗೆ ಪೂರಕವಾಗಿ ಕಾರ್ಯನಿರ್ವಹಿಸಿದ್ದಾರೆಂದರು.

ಪ್ರಸುತ ವರ್ಷದಲ್ಲಿ ಜಿಲ್ಲೆಯಲ್ಲಿ 42000 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸುತ್ತಿದ್ದಾರೆ. ಜಿಲ್ಲೆಯ ಒಟ್ಟಾರೆ ಫಲಿತಾಂಶವನ್ನು ಕಳೆದ ಬಾರಿಗಿಂತ ಈ ಸಲ ಕನಿಷ್ಠ ಶೇ10 ರಷ್ಟು ಅಂದರೆ ಶೇ. 85 ರಷ್ಟಾದರೂ ಹೆಚ್ಚಿಸಲು ಗುರಿಯನ್ನು ಹಾಕಿಕೊಳ್ಳಲಾಗಿದೆ. ಅದಕ್ಕಾಗಿ ವಿಶೇಷ ಬೋಧನೆ, ಸಿಸಿಇ ಮಾಹಿತಿ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿ, ಇಲಾಖೆ ಶಿಕ್ಷಕರ ಜ್ಞಾನದ ಮಟ್ಟವನ್ನು ಸುಧಾರಿಸಲು ತರಬೇತಿ ನೀಡುವುದು ಸೇರಿದಂತೆ ಕ್ರಿಯಾ ಯೋಜನೆ ತಯಾರಿಸಿ, ಹತ್ತು ಅಂಶಗಳ ಕಾರ್ಯಕ್ರಮವನ್ನು ಹಮ್ಮಿಕೊಂಡು ಅವುಗಳನ್ನು ಅನುಷ್ಠಾನಗೊಳಿಸಲಾಗಿದೆ. ಫೋನ್ ಇನ್ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸಮಸ್ಯೆ, ಸಂದೇಹಗಳನ್ನು ನಿವಾರಿಸಿಕೊಳ್ಳಲು ಉತ್ತಮವಾದ ಕಾರ್ಯಕ್ರಮವಾಗಿದ್ದು, ಜಿಲ್ಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಮಾಡಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆಯೆಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಕಲ್ಯಾಣ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ ಎನ್ ಪಾಟೀಲ ಮಾತನಾಡಿ ಕಳೆದ 55 ದಿವಸಗಳ ಕಾಲ ಶಿಕ್ಷಕರು ಯಾವುದೇ ಸಂಭಾವನೆ ಪಡೆಯದೆ ಸ್ವಯಂ ಇಚ್ಛೆಯಿಂದ ಸೇವೆ ಸಲ್ಲಿಸಿರುವುದು ಗಮನಿಸಿದರೆ ನಮ್ಮ ಭಾಗದ ಶಿಕ್ಷಕರಿಗೆ ವಿದ್ಯಾರ್ಥಿಗಳ ಹಿತದೃಷ್ಟಿ ಪ್ರಮುಖವಾಗಿದೆಯೆಂದು ತಿಳಿದುಬರುತ್ತದೆ. ಈ ಕಾರ್ಯಕ್ರಮ ರಾಜ್ಯಕ್ಕೆ ಮಾದರಿ ಹಾಗೂ ಶೈಕ್ಷಣಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರವೆಂದು ಬಣ್ಣಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜ್ಞಾನಾಮೃತ ಕೇಂದ್ರದ ಉಪಾಧ್ಯಕ್ಷ ಚಂದ್ರಕಾಂತ ಬಿರಾದಾರ ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ತುಂಬಾ ಸಹಕಾರಿಯಾಗಿದೆ. ರಾಜ್ಯದ ಅನೇಕ ಜಿಲ್ಲೆಗಳಿಂದ ಪ್ರತಿದಿವಸ ನೂರಾರು ಕರೆಗಳನ್ನು ಸ್ವೀಕರಿಸಿ ಅವರ ಸಮಸ್ಯೆಗೆ ಸ್ಪಂದಿಸಲಾಗಿದೆ. ಕಳೆದ 55 ದಿವಸಗಳಲ್ಲಿ ಸುಮಾರು 7000 ಪ್ರಶ್ನೆಗಳಿಗೆ ಉತ್ತರ ನೀಡಿರುವುದು ಒಂದು ಮಾದರಿಯುತ ಸೇವೆಯಾಗಿದೆ. ಈ ಕಾರ್ಯಕ್ಕೆ ಸಹರಿಸಿದ ಎಲ್ಲರೂ ಅಭಿನಂದನಾರ್ಹರೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಣಾಧಿಕಾರಿ ಭರತರಾಜ ಸಾವಳಿಗಿ, ಸಮಗ್ರ ಶಿಕ್ಷಣ ಯೋಜನಾ ಉಪ ಸಮನ್ವಯಾಧಿಕಾರಿ, ಸಿ.ಬಿ ಪಾಟೀಲ, ಮಾಧ್ಯಮಿಕ ಶಾಲಾ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ ಪಾಟೀಲ, ಎಸ್‌ಎಸ್‌ಎಲ್‌ಸಿ ಜಿಲ್ಲಾ ನೋಡಲ್ ಅಧಿಕಾರಿ ರಮೇಶ ಜಾನಕರ, ಆರ್.ಎಮ್.ಎಸ್.ಎ ವಿಭಾಗ ಪ್ರಮುಖ ಮಹೇಶ ಬಸರಕೋಡ, ಜ್ಞಾನಾಮೃತ ಶೈಕ್ಷಣಿಕ, ವೃತ್ತಿ ಮಾರ್ಗದರ್ಶನ ಕೇಂದ್ರದ ಅಧ್ಯಕ್ಷ ಕೆ. ಬಸವರಾಜ, ಉಪನ್ಯಾಸಕ ಎಚ್ ಬಿ ಪಾಟೀಲ ಹಾಗೂ ಇನ್ನೂ ಅನೇಕರು ಭಾಗವಹಿಸಿದ್ದರು. ●

---

➤ ಪುಟ 7 ರಿಂದ..... ವಿವೇಕಾನಂದರ ಕನಸು ...

ವಿಮಾನಗಳು ಇಳಿಯುವ ಸ್ಥಿತಿಗೆ ತಂದರು. ಆ ನಂತರ ಓರ್ವ ಮಿಲಿಟರಿ ಅಧಿಕಾರಿ ಗುರೂಜಿಯವರನ್ನು ಭೇಟಿಯಾದಾಗ 'ನೀವು ನಿಮ್ಮ ಸ್ವಯಂ ಸೇವಕರಿಗೆ ಇಂಥ ಸಾಮರ್ಥ್ಯ ಬರಲು ಎಂತಹ ಶಿಕ್ಷಣ ನೀಡುವಿರಿ' ಎಂದು ಕೇಳಿದಾಗ "ಗುರೂಜಿ ಅವರು ನಿತ್ಯ ಶಾಖೆಯಲ್ಲಿ ಕಬಡ್ಡಿ ಆಡುತ್ತಾರೆ. ಆದ್ದರಿಂದ ಈ ಶಕ್ತಿ ಬರುತ್ತದೆ" ಎಂದರು.

ರಾಷ್ಟ್ರಜೀವನದ ಎಲ್ಲ ಕ್ಷೇತ್ರಗಳಲ್ಲೂ ರಾಷ್ಟ್ರೀಯ ಭಾವನೆ ಜಾಗೃತವಾಗಬೇಕೆಂದು ಗುರೂಜಿಯವರು ಸಂಘದ ಸ್ವಯಂಸೇವಕರನ್ನು ವಿವಿಧ ಕ್ಷೇತ್ರಗಳಿಗೆ ಕಳುಹಿಸಿದರು. ಆ ಸ್ವಯಂಸೇವಕರು ತಾವು ಪಡೆದ ಸಂಸ್ಕಾರ ಹಾಗೂ ಸ್ವಪ್ರತಿಭೆಯಿಂದ ಆಯಾ ಕ್ಷೇತ್ರಗಳನ್ನು ರಾಷ್ಟ್ರೀಯ ವಿಚಾರದಿಂದ ಬಲಿಷ್ಠವಾಗಿ ಕಟ್ಟಿ ಬೆಳೆಸಿದರು. ಹೀಗೆ ಭಾರತೀಯ ಮಜ್ದೂರ್ ಸಂಘ, ಭಾರತೀಯ ಜನಸಂಘ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು, ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಇನ್ನೂ ಮುಂತಾದ ಸಂಘಟನೆಗಳು ಪ್ರಾರಂಭವಾದವು. ಹಿಂದೂ ಸಮಾಜಕ್ಕೆ ಗುರೂಜಿಯವರ ಅತಿದೊಡ್ಡ ಕಾಣಿಕೆ 'ವಿಶ್ವ ಹಿಂದೂ ಪರಿಷತ್". ಮಠಾಧೀಶರುಗಳು ಸಹ ನವಗ್ರಹಗಳಂತೆ ಇದ್ದು, ಮೇಲ್ಜಾತಿ, ಕೆಳಜಾತಿ ಎಂದು ಹಿಂದೂ ಸಮಾಜ ವಿಭಜನೆಗೊಂಡು ಅನ್ಯಮತಗಳ ಆಕ್ರಮಣಕ್ಕೆ ತುತ್ತಾಗಿ ನಲಗುತ್ತಿದ್ದಾಗ ವಿವಿಧ ಪಂಥಗಳ ಮಠಾಧೀಶರನ್ನು ಏಕಮುಖಿಗೊಳಿಸಿ ಹಿಂದವಾಃ ಸೋದರಾ ಸ್ಸರ್ವೇ' ಹಿಂದುಃರ್‌ನ ಪತಿತೋಭವ' ಎಂದು ಹಿಂದೂ ಸಮಾಜಕ್ಕೆ ಭರವಸೆ ಹುಟ್ಟುವಂತೆ ಮಾಡಿದ್ದು ಗುರೂಜಿಯವರ ಪ್ರಯತ್ನದಿಂದಲೇ.

ಇಂದು ಆರ್‌ಎಸ್‌ಎಸ್ ಅನ್ನು ತಿಳಿಯದವರು ಯಾರೂ ಇಲ್ಲ. ದೇಶಾದ್ಯಂತ ವಿಶಾಲವಾಗಿ ಅದರ ಶಾಖೆಗಳು ಹರಡಿವೆ. ಅದರ ಮೂಲಕ ಲಕ್ಷಾಂತರ ಸೇವಾ ಚಟುವಟಿಕೆಗಳು ನಡೆಯುತ್ತಿವೆ. ಡಾ|| ಜಿ, ಗುರೂಜಿಯವರು ಇಂದಿಲ್ಲ. ಆದರೆ ವಿವೇಕಾನಂದರ ಕನಸನ್ನು ನನಸು ಮಾಡುವ ಕಾರ್ಯ ದಿನೇ ದಿನೇ ಬೆಳೆಯುತ್ತಲೇ ಇದೆ. ●

**ಎಲ್ಲರಿಗೂ ಗುರು ಆಗಬೇಕು ಅಂತ ಇಚ್ಛೆ. ಆದರೆ ಶಿಷ್ಯನಾಗಬೇಕು ಅಂತ ಯಾರಿಗೆ ತಾನೇ ಇಚ್ಛೆಯಿದೆ?**

**ಅವಿಸ್ಮರಣೀಯರು**
**ಭಾಗ-4**

# ಮೇದಿನಿಪುರದಲ್ಲೊಂದು ಕ್ರಾಂತಿಯ ಕಲರವ..



**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



ಬಂಗಾಳದ ತೋಟದಿಂದ, ತಾಯಿ ಭಾರತಿಗೆ ಪೂಜಿತಗೊಂಡ ಕ್ರಾಂತಿಯ ಹೂವುಗಳು ಅಸಂಖ್ಯ.

ಅಂಥಾ ಒಬ್ಬ ಯುವಕನ ಸ್ಮರಣೆ ಇದು.

ಮೇದಿನಿಪುರ(ಮಿಡ್ನಾಪುರ)ಅನ್ನೋದು ಬಂಗಾಳದ ಒಂದು ಜಿಲ್ಲೆ. "ಅನುಶೀಲನ ಸಮಿತಿ"ಯ ಪ್ರಭಾವದಿಂದ ಅನೇಕ ಯುವಕ ಕ್ರಾಂತಿಕಾರಿಗಳು ಅಲ್ಲಿ ಬೆಳೆದಿದ್ರು. ಮೇದಿನಿಪುರದಲ್ಲಿ ಇದ್ದ ಆಂಗ್ಲ ಅಧಿಕಾರಿಗಳು ಅತಿಕ್ರೂರತನದಿಂದ ಆಳ್ವಿಕೆ ನಡೆಸ್ತಿದ್ರು. ಅಲ್ಲಿನ ಮ್ಯಾಜಿಸ್ಟ್ರೇಟ್‌ಗಳಂತೂ, ಕ್ರಾಂತಿಕಾರಿಗಳ ಮೇಲೆ ಕೇಸುಗಳನ್ನು ಹಾಕಿ, ವಿವಿಧ ಶಿಕ್ಷೆಗಳನ್ನು ವಿಧಿಸ್ತಿದ್ರು.

ಹೀಗಾಗಿಯೇ, ಮೇದಿನಿಪುರದ ಯುವಕರು ಆಲ್ಲಿನ ಬ್ರಿಟಿಷರಿಗೆ ಒಂದು ಬಿಸಿ ಮುಟ್ಟಿಸಿದರು. ತಮ್ಮ ಜಿಲ್ಲೆಗೆ ಒಬ್ಬ ಭಾರತೀಯನನ್ನು ಮ್ಯಾಜಿಸ್ಟ್ರೇಟ್ ಮಾಡೋವರೆಗೂ, ಉಳಿದ ಆಂಗ್ಲ ಮ್ಯಾಜಿಸ್ಟ್ರೇಟ್‌ಗಳನ್ನು ಕೊಲ್ತಿವಿ ಅಂತ. ಬ್ರಿಟಿಷರು ಇದನ್ನು ಅಷ್ಟೊಂದು ಪರಿಗಣಿಸಲಿಲ್ಲ.

ಆಗ ಅಲ್ಲಿಗೆ 'ಜೇಮ್ಸ್ ಪ್ಯಾಡಿ' ಅನ್ನೋನು ಮ್ಯಾಜಿಸ್ಟ್ರೇಟ್ ಆಗಿ ಬಂದ. ಪ್ರತಿಜ್ಞೆ ಮಾಡಿದ್ದ ಕ್ರಾಂತಿಕಾರಿಗಳು, ಅದೊಂದು ಸಮಾರಂಭದಲ್ಲಿ, ಅತಿಥಿಯಾಗಿ ಬಂದಿದ್ದ ಅವನನ್ನು ಗುಂಡು ಹಾರಿಸಿ ಕೊಂದೇ ಬಿಟ್ಟರು. ಬ್ರಿಟಿಷರು ಕಲ್ಕತ್ತೆಯಿಂದ ವೈದ್ಯರನ್ನು ಕರೆಸಿದರು. ವೈದ್ಯರು ಪ್ಯಾಡಿಯಾ ದೇಹದಿಂದ ಗುಂಡುಗಳನ್ನು ಹೊರತೆಗೆದರೂ, ಅವನನ್ನು ಬದುಕಿಸಲಾಗಲಿಲ್ಲ. ಯುವಕರ ನಿಲುವು ಸ್ಪಷ್ಟವಾಗಿತ್ತು. ಆಂಗ್ಲರು ಈಗ ಸ್ವಲ್ಪ ಚಿಂತಿಸಲಾರಂಭಿಸಿದರು.

ಆನಂತರ 'ಡಾಗ್ಲಾಸ್'ಎಂಬ ಆಂಗ್ಲನನ್ನು ಮತ್ತೆ ಮ್ಯಾಜಿಸ್ಟ್ರೇಟ್ ಆಗಿ ನಿಯೋಜಿಸಿದರು. ಆತ ಮೊದಲಿಂದಲೂ ಹೆದರಿದ್ದ. ಅದೊಮ್ಮೆ "ಡಿಸ್ಟ್ರಿಕ್ಟ್ ಬೋರ್ಡ್"ನ ಸಭೆ ಇತ್ತು. ಸಂಜೆಯವರೆಗೂ ಶಾಂತಿಯುತವಾಗಿಯೇ ಇತ್ತು. ಆದರೆ ಗಂಟೆ 5 ಆಗುತ್ತಿದ್ದಂತೆ ಇಬ್ರು ಯುವಕರು, 'ಡಾಗ್ಲಾಸ್'ನ ಹತ್ತಿರ ಬಂದರು. ನೋಡುನೋಡುತ್ತಲೇ ಆ ಆಂಗ್ಲನ ಮೇಲೆ ಗುಂಡು ಹಾರಿಸಲಾಯಿತು. ಆ ಅಧಿಕಾರಿ ಧರೆಗುರುಳಿದ. ತಕ್ಷಣ ಇಬ್ಬರೂ ಯುವಕರು ಓಡಿ ಹೋದರು. ಒಬ್ಬ ಅಲ್ಲೇ ಇದ್ದ ಪಾರ್ಕಿನಲ್ಲಿ ಅಡಗಿ ಕುಳಿತ. ಮತ್ತೊಬ್ಬ ಹತ್ತಿರದ ಲಾಡ್ಜ್ ಒಳಗೆ ನುಸುಳಿ ಹೋದ. ಪಾರ್ಕಿನ ಒಳಗೆ ಬಚ್ಚಿಟ್ಟುಕೊಂಡ ಯುವಕ ಸುಲಭವಾಗಿ ಬ್ರಿಟಿಷರ ಕಣ್ಣಿಗೆ ಬಿದ್ದುಬಿಟ್ಟ. ಕೂಡಲೇ ಪಾರ್ಕಿಗೆ ಬಂದ ಬ್ರಿಟಿಷ್ ಪಡೆ ಅವನ ಮೇಲೆ ಗುಂಡಿನ ದಾಳಿ ನಡೆಸಿತು. ಎಷ್ಟೇ ತಪ್ಪಿಸಿಕೊಳ್ಳಲು ಯತ್ನಿಸಿದರೂ, ಆ ಹುಡುಗನಿಗೆ ಗುಂಡುಗಳು ತಗುಲಿದವು. ಕೆಳಗೆ ಬಿದ್ದ ಆತನನ್ನು ಆಂಗ್ಲರು ಸೆರೆ ಹಿಡಿದರು.

ಅವನ ಹೆಸರು "ಪ್ರದ್ಯೋತ ಕುಮಾರ ಭಟ್ಟಾಚಾರ್ಯ".

ಗುಂಡಿನಿಂದ ಬಳಲಿದ್ದ 'ಡಾಗ್ಲಾಸ್' ಬದುಕಿ ಉಳಿಯಲಿಲ್ಲ. ಇತ್ತ ಸೆರೆಮನೆಯಲ್ಲಿ 'ಪ್ರದ್ಯೋತ'ನಿಗೆ ಅವನ ಸಹಚರರ ಬಗ್ಗೆ ಸುಳಿವು ನೀಡಬೇಕೆಂದು ಚಿತ್ರ-ವಿಚಿತ್ರ ಹಿಂಸೆ ನೀಡಲಾಯಿತು. ದೇಶಕ್ಕಾಗಿ ಎಲ್ಲ ನೋವನ್ನೂ ಸಹಿಸಿಕೊಂಡನೆ ಹೊರತು, ಯಾರ ಹೆಸರನ್ನೂ ಹೇಳಲಿಲ್ಲ.

ಕೊನೆಗೆ ವಿಚಾರಣೆಯ ನಂತರ "ಪ್ರದ್ಯೋತ"ನಿಗೆ ಮರಣದಂಡನೆಯ ಶಿಕ್ಷೆ ವಿಧಿಸಲಾಯಿತು. 1933 ಜನವರಿ 12 ರಂದು ಆತನನ್ನು ನೇಣಿಗೇರಿಸಿದರು.

ಆದರೂ ಆಂಗ್ಲರು ಮತ್ತೊಮ್ಮೆ "ಬರ್ಗ್"ಎಂಬ ಮತ್ತೊಬ್ಬನನ್ನು ಮಾಡಿದರು. ತಾವೂ ಅಷ್ಟೇ ಬಲವಂತರು ಅಂತ, ಪಟ್ಟು ಹಿಡಿದ ಕ್ರಾಂತಿಕಾರಿಗಳು ಆ ಅಧಿಕಾರಿಯನ್ನೂ ಕೊಂದರು. ಆ ಕಾರಣಕ್ಕೆ "ನಿರ್ಮಲ್ ಜೀವನ ಘೋಷ್", "ಬ್ರಿಜ್ ಕಿಶೋರ್ ಚಕ್ರವರ್ತಿ", "ರಾಮಕೃಷ್ಣ ರೈ" ಈ ಮೂವರನ್ನೂ ಗಲ್ಲಿಗೇರಿಸಲಾಯಿತು. ಕಡೆಗೂ ಎಚ್ಚೆತ್ತ ಬ್ರಿಟಿಷರು, ಕ್ರಾಂತಿಕಾರಿಗಳ ಬೇಡಿಕೆಯಂತೆ, ಮುಂದೆ ಭಾರತೀಯನನ್ನೇ ಮ್ಯಾಜಿಸ್ಟ್ರೇಟ್‌ನನ್ನಾಗಿ ಮಾಡಿದರು. ಅಲ್ಲಿಗೆ ಆ ಎಲ್ಲ ಹುತಾತ್ಮರ, ಕ್ರಾಂತಿಕಾರಿಗಳ ಗೆಲುವಾಗಿತ್ತು.

ನಮಗೆ ಸ್ವಾತಂತ್ರ್ಯ ಪುಗಸಟ್ಟೆ ಸಿಕ್ಕಿಲ್ಲ. ನಮ್ಮೀ ಸ್ವಾತಂತ್ರದ ಮಹಲು, ಅದೆಷ್ಟೋ ಕ್ರಾಂತಿಕಾರಿಗಳ ಬಲಿದಾನದ ಭದ್ರ ಅಡಿಪಾಯದ ಮೇಲೆ ನಿಂತಿದೆ ಅನ್ನೋದು, ಬಹಳಷ್ಟು ಮಂದಿಗೆ ಗೊತ್ತಾಗಲೇ ಇಲ್ಲ. ಯಾಕಂದ್ರೆ, ಅಂಥಾ ಹುತಾತ್ಮರನ್ನು ಪರಿಚಯಿಸುವ ಕೆಲಸ, ಯಾವ ಶಾಲಾ ಪುಸ್ತಕಗಳೂ ಮಾಡಲೇ ಇಲ್ಲ. ಅಣುಮಾತ್ರವೂ, ಕ್ಷಣಮಾತ್ರವೂ ತಮ್ಮ ಬದುಕಿನ ಬಗ್ಗೆ ಯೋಚಿಸದೆ, ಮಾತೃಭೂಮಿಯ ಸೇವೆಗಾಗಿ ಸಂಪೂರ್ಣವಾಗಿ ಅರ್ಪಿಸಿಕೊಂಡ ಯುವಕರೆಷ್ಟೋ. ವಿದ್ಯಾರ್ಥಿಗಳೆಷ್ಟೋ. ಅವರೆಲ್ಲರ ತ್ಯಾಗವನ್ನು ಮರೆತಿದ್ದರ ಪರಿಣಾಮವೇ, ಇವತ್ತಿನ ದೇಶದ ಈ ಸ್ಥಿತಿ.!

ಆ ಹುತಾತ್ಮ, "ಪ್ರದ್ಯೋತ"ನಿಗೊಂದು ಭಾವಪೂರ್ಣ ನಮನ. ●



## ಶ್ರೀ ಕೆ. ಎಸ್. ಶ್ರೀಧರ ಮೂರ್ತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ
## (12.03.1950 – 13.02.2020)

**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಲ್ಲಿ ಹಲವಾರು ವರ್ಷಗಳಿಂದ ಲೆಕ್ಕ ಪರಿಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಕೆ. ಎಸ್. ಶ್ರೀಧರ ಮೂರ್ತಿಯವರು ದಿನಾಂಕ 13-2-2020 ರಂದು ಸ್ವರ್ಗಸ್ಥರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಶಿಕ್ಷಕ ಸಂಘವು ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಈ ಮೂಲಕ ಅರ್ಪಿಸುತ್ತದೆ.**

**ಹಣದಿಂದ ಅನ್ನ ಮಾತ್ರ ಸಿಗುತ್ತದೆ. ಅದನ್ನೇ ನಿನ್ನ ಜೀವನದ ಗುರಿಯನ್ನಾಗಿ ಮಾಡಿಕೊಳ್ಳಬೇಡ.**

# ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಫೋನ್ ಇನ್ ಕಾರ್ಯಕ್ರಮ ಸಹಕಾರಿ



ಬಿ.ಇಡಿ ಕಾಲೇಜಿನ ಉಪನ್ಯಾಸಕ ಶಾಂತಗೌಡ ಪಾಟೀಲ

## ಫಲಿತಾಂಶ ಸುಧಾರಣೆಗೆ ಫೋನ್-ಇನ್ ಸಹಕಾರಿ



## ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಫೋನ್-ಇನ್ ಕಾರ್ಯಕ್ರಮ ವಿನೂತನ ತಂತ್ರ



ಪ್ರವಾಚಕ ಶಾಂತಗೌಡ ಪಾಟೀಲ್ ಅಭಿಪ್ರಾಯ | 55 ದಿನಗಳ ಕಾರ್ಯಕ್ರಮ ಸಮಾರೋಪ

## ಫೋನ್ ಇನ್ ವಿದ್ಯಾರ್ಥಿಮುಖಿ ಕಾರ್ಯಕ್ರಮ



## ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಫೋನ್-ಇನ್ ಕಾರ್ಯಕ್ರಮ ವಿನೂತನ ತಂತ್ರ



MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026

Date of Publishing : 17-02-2020 Date of Posting 20h or 21st of every month Posted at Periodical Rate

# ಮಾನ್ಯ ಸುರೇಶ್ ಕುಮಾರ್‌ರವರ ಜೊತೆ ಕ.ರಾ.ಮಾ.ಶಿ.ಸಂಘದ ಕಾರ್ಯಕರ್ತರ ಸಭೆ



ಮಾನ್ಯ ಎಸ್. ಸುರೇಶ್ ಕುಮಾರ್ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹಾಗೂ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ನಿರ್ದೇಶಕರು (ಪ್ರೌಢ ಶಿಕ್ಷಣ) ಇವರೊಂದಿಗೆ ಶಿಕ್ಷಕರ ಸಮಸ್ಯೆಗಳ ಬಗ್ಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳ ಸಭೆ ನಡೆಸಲಾಯಿತು. • 2008 ರ ನಂತರ ನೇಮಕವಾದ ಶಿಕ್ಷಕರಿಗೆ ವಿಶೇಷ ವೇತನ ಬಗ್ಗೆ ವಿವರವಾದ ಚರ್ಚೆ ನಡೆಯಿತು. • ಈಗ ಶಿಕ್ಷಕರಿಂದ ಹಣ ಹಿಂಪಡೆಯುವುದನ್ನು ನಿಲ್ಲಿಸಲಾಗುವುದು ಹಾಗೂ ಮಾರ್ಚ್ 5 ರ ನಂತರ ಆರ್ಥಿಕ ಇಲಾಖೆಯ ಜೊತೆಯಲ್ಲಿ ಸಭೆ ಕರೆಯಲಾಗುವುದು. • ಜೆ.ಓ.ಸಿ. ಇಂದ ವಿಲೀನವಾಗಿ ಪ.ಪೂ.ಶಿ ಇಲಾಖೆಯಲ್ಲಿ ಉಪನ್ಯಾಸಕರಾಗಿ ಸೇವೆಸಲ್ಲಿಸುತ್ತಿರುವ ಉಪನ್ಯಾಸಕರ ಬಿ.ಈಡಿ. ಕಡ್ಡಾಯವನ್ನು ರದ್ದುಗೊಳಿಸಲಾಗುವುದು • ವೃತ್ತಿ ಶಿಕ್ಷಕರಿಗೆ ಸಮಾನ ವೇತನ ಜಾರಿ ಮಾಡಲು ಆರ್ಥಿಕ ಇಲಾಖೆಯೊಂದಿಗೆ ಸಭೆ ಕರೆಯಲಾಗುವುದು ಎಂದು ಮಾನ್ಯ ಸಚಿವರು ಸಭೆಯಲ್ಲಿ ಹೇಳಿದರು.

# ಅಖಿಲ ಭಾರತ ಕಾರ್ಯಕಾರಿಣಿ ಮತ್ತು ಕಾರ್ಯ ಸಮಿತಿ ಸಭೆ




ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಅಖಿಲ ಭಾರತ ಕಾರ್ಯಕಾರಿಣಿ ಮತ್ತು ಕಾರ್ಯಸಮಿತಿ ಸಭೆಯನ್ನು ದಿನಾಂಕ 8 ಮತ್ತು 9 ಫೆಬ್ರವರಿ 2020 ರಂದು ತೆಲಂಗಾಣ ರಾಜ್ಯದ ಹೈದರಾಬಾದಿನ ಭಾಗ್ಯನಗರದಲ್ಲಿ ನಡೆಸಲಾಯಿತು.

ಎಬಿಆರ್‌ಎಸ್‌ಎಂ ನ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ ಪಿ ಸಿಂಘಲ್‌ಜಿ ರವರ ಅಧ್ಯಕ್ಷತೆಯಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಕಾರ್ಯವಾಹರಾದ ಮಾನ್ಯ ಡಾ॥ ಮನಮೋಹನ ವೈದ್ಯರವರು ಮಾರ್ಗದರ್ಶನ ಮಾಡಿದರು. ಈ ಸಮಾರಂಭದಲ್ಲಿ ಎಬಿಆರ್‌ಎಸ್‌ಎಂನ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಶಿವಾನಂದ ಸಿಂಧನಕೇರ ಹಾಗೂ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಮಹೇಂದ್ರ ಕಪೂರ್ ಜಿರವರು ಉಪಸ್ಥಿತರಿದ್ದರು.

ಪ್ರಾಂತವಾರು ಪ್ರತಿನಿಧಿಗಳ ಪರಿಚಯದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಈ ಹಿಂದಿನ ಕಾರ್ಯಕಾರಿಣಿ ವರದಿಯನ್ನು ಸಭೆಗೆ ಓದಿ ಹೇಳಲಾಯಿತು. ಇಲ್ಲಿಯವರೆಗೆ ವಿವಿಧ ಪ್ರಾಂತಗಳಲ್ಲಿ ನಡೆಸಲಾದ ಕಾರ್ಯಕ್ರಮಗಳ ವರದಿಯನ್ನು ಸಭೆ ಸದಸ್ಯರಿಗೆ ಹೇಳಲಾಯಿತು. ನವೆಂಬರ್‌ನಲ್ಲಿ ಗುಜರಾತ್‌ನಲ್ಲಿ ನಡೆಸಲಾದ ರಾಷ್ಟ್ರೀಯ ಅಧಿವೇಶನದ ಬಗ್ಗೆ ಮಾಹಿತಿ ನೀಡಲಾಯಿತು. ಅಧಿವೇಶನದ ಬಗ್ಗೆ ಪ್ರಾಂತವಾರು ಅನಿಸಿಕೆಯನ್ನು ಪಡೆಯಲಾಯಿತು. ಕಾರ್ಯಕಾರಿಣಿ ಸಭೆಯಲ್ಲಿ 2019–20ನೇ ಸಾಲಿನ ಅವಧಿಯ ಆಯವ್ಯಯ ಮಂಡನೆಯಾಗಿ ಸರ್ವಸದಸ್ಯರ ಅನುಮೋದನೆ ಪಡೆಯಲಾಯಿತು.

ನಂತರ ಅವಧಿಗಳಲ್ಲಿ ಪ್ರಾಥಮಿಕ, ಸೆಕೆಂಡರಿ ಹಾಗೂ ಉನ್ನತ ಶಿಕ್ಷಣ ವಿಭಾಗ ಪ್ರಮುಖರಿಂದ ನಡೆಸಲಾದ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಾಂತವಾರು ವರದಿ ಪಡೆಯಲಾಯಿತು. ಕರ್ನಾಟಕದ ಪರವಾಗಿ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಚಿದಾನಂದ ಪಾಟೀಲರವರು ಕರ್ತವ್ಯಬೋಧ ದಿವಸ, ಫೋನ್ ಇನ್ ಕಾರ್ಯಕ್ರಮ, ವಿಭಾಗವಾರು ನಡೆಸಲಾದ ಅಭ್ಯಾಸವರ್ಗಗಳ ಬಗ್ಗೆ ಮಾಹಿತಿ ನೀಡಿದರು. ಸಂಘಟನೆ ಕಾರ್ಯವಿಸ್ತಾರ, ಮುಂದಿನ 3 ವರ್ಷಗಳ ಅವಧಿಯ ಯೋಜನೆ ಹೇಗಿರಬೇಕು ಎಂಬುದರ ಬಗ್ಗೆ ಶ್ರೀ ಮಹೇಂದ್ರ ಕಪೂರ್‌ರವರು ವಿಸ್ತಾರವಾಗಿ ತಿಳಿಸಿ ಹೇಳಿದರು.

ಅಲ್ಲದೆ ಜಿಲ್ಲಾ, ವಿಭಾಗ ಹಾಗೂ ಪ್ರಾಂತ ಮಟ್ಟಗಳಲ್ಲಿ ಶೈಕ್ಷಣಿಕ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಾರ್ಯಕ್ರಮಗಳನ್ನೂ ಆಯೋಜಿಸುವಂತೆಯೂ ಕಾರ್ಯಯೋಜನೆ, ಜೊತೆಜೊತೆಯಲ್ಲೇ ಕಾರ್ಯಕರ್ತ ಹಂತ ಹಂತವಾಗಿ ಬೆಳೆಯುವಂತಾಗಬೇಕೆಂದೂ ಮತ್ತು ಶಾಲೆಯ ಸದಸ್ಯತ್ವದಿಂದ ಆರಂಭಿಸಿ ಹೋಬಳಿ, ತಾಲ್ಲೂಕು, ಜಿಲ್ಲಾ, ವಿಭಾಗ ಹಾಗೂ ರಾಜ್ಯ ಹಂತದ ಸಂಘಟನೆ ಬೆಳವಣಿಗೆ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಯೋಜಿಸುವಂತೆಯೂ ತಿಳಿಸಿ ಹೇಳಿದರು.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com